QUESTION FOR ANSWER ON THE DAY
(BUT NOT TAKEN UP)

WATER SUPPLY TO CHANNAGIRI TOWN

88. Sri N. G. HALAPPA (Channagiri).—

Will the Minister for Municipal Administration be pleased to state :—

(*a*) whether Government has decided to draw water from Bhadra Canal to be supplied for drinking purposes to Channagiri Town ;

(*b*) whether Channagiri Municipality has requested Government to supply water from Bhadra Canal for drinking purpose ;

(*c*) if so, the action taken in the matter ?

Sri B. BASAVALINGAPPA (Minister for Municipal Administration).—

(*a*) No.

(*b*) Yes.

(*c*) The estimate was got up for Rs. 12 lakhs with Bhadra Canal as the source of supply the cost per capital exceeded the ceiling amount of Rs. 80 prescribed for N.R.W.S. schemes. In view of the prohibitive cost of the scheme, this was not considered. A fresh water supply scheme with Bore-wells as source of supply has been prepared at an estimated cost of Rs. 4,40,000. The estimate is pending with the Executive Engineer (P.H.E. Division), Shimoga for want of 10 per cent contribution from the Town Municipal Council, Channagiri.

REPLY TO A CALL ATTENTION NOTICE

Madam SPEAKER.—There is a call attention notice which is put down today's List of Business. Let us take it up. It is with regard to misbehaviour of a doctor at Kanakatte.

Sri H. SIDDAVEERAPPA.—Madam, I am requesting you to take it up tomorrow because I have not got the full report about it.

Sri H. S. SIDDAPPA.—I have narrated yesterday half the story. The rest of it I will narrate now and leave it to you and to the Hon'ble Minister to take such action as he deems fit.

Sri H. SIDDAVEERAPPA.—If he insists, I have got some sketch report which does not furnish full information. I will give it.

Sri H. S. SIDDAPPA.—No. Madam, I want the Hon'ble Minister to go into more details. I am not insisting on his reply just now.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿರುವಾಗ ಇದರ ಬಗ್ಗೆ ದೀರ್ಘ ಕಾಲ ಭಾಷಣ ಮಾಡಲು ಅವಕಾಶವಿಲ್ಲ. ಮುಂತ್ರಿಗಳು ಹೇಳಿಕೆ ಕೊಟ್ಟ ಮೇಲೆ ಏನಾದರು ಒಂದೆರಡು ಕ್ಲಾರಿಫಿಕೇಷನ್‌ಗಳನ್ನು ಕೇಳಬಹುದು. ಈಗ ತಮಗೆ ಭಾಷಣ ಮಾಡಲು ಅವಕಾಶ ವಿಲ್ಲ. ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಗ್ಗೆ ಹೇಳಿಕೆ ಬಂದ ಮೇಲೆ ತಾವು ಪ್ರಾತನಾಡ ಬಹುದು.

NOTICE OF ADJOURNMENT MOTION

re : STUDENTS' STRIKE AT HUBLI

2.00 P.M.

†ಶ್ರೀ ವಿ. ಎನ್. ಪಾಟೀಲ್(ಹುಮ್ನಾಬಾದ್).—ಹುಬ್ಬಳ್ಳಿಯಲ್ಲಿ ಮೊನ್ನೆ ದಿವಸ ಕೇನ್ ಚಾರ್ಜ್ ಆದುದಕ್ಕೆ ಕಾರಣವೇನು, ವಿದ್ಯಾರ್ಥಿಗಳ ಮತ್ತು ಸರ್ಕಾರದ ನಡುವೆ ಸಂಧಾನವೇನಾದರೂ ನಡೆಯುತ್ತಿದೆಯೇ, ವಿದ್ಯಾರ್ಥಿಗಳ ಬೇಡಿಕೆ ಏನಿದೆ, ಅವರ ಬೇಡಿಕೆ ನ್ಯಾಯವಿದೆಯೇ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಕ್ಕೆ ಶಿಕ್ಷಣ ಸಚಿವರು ಒಂದು ಹೇಳಿಕೆ ಮಾಡುವುದಾಗಿ ತಿಳಿಸಿದರು. ನಿನ್ನೆ ಕೂಡ ಹುಬ್ಬಳ್ಳಿಯಲ್ಲಿ ಕೇನ್ ಚಾರ್ಜ್ ಆಗಿದೆ. ಪರಿಸ್ಥಿತಿ ಹತೋಟಿ ಮೀರಿ ಹೋಗುವ ಸಂಭವವಿದೆ. ನಾಳೆ ವಿದ್ಯಾರ್ಥಿಗಳಲ್ಲಿ ಅಶಿನ್ತ ಮುಂತಾಗಿ ಸರ್ಕಾರದವರೆ ಹೇಳುತ್ತಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಇಲ್ಲಿ ಕುಳಿತುಕೊಂಡು ಹೇಳುತ್ತಿದ್ದಾರೆ. ಅಲ್ಲಿಂದ ಬಂದಿರುವ ಸದಸ್ಯರು ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ವಿ. ಎನ್. ಪಾಟೀಲ್.—ಕಾಲ್ ಅಟೆನ್‌ಷನ್ ವಿಷಯ ಬರುವುದಕ್ಕೆ ನಿಧಾನವಾಗಿ ಬಹುದು. ಪರಿಸ್ಥಿತಿ ಯಾವರೀತಿ ಇರುತ್ತದೆಯೋ ಹೇಳುವುದಕ್ಕೆ ಆಗುವುದಿಲ್ಲ. ದಯವಿಟ್ಟು ಶಿಕ್ಷಣ ಸಚಿವರು ಇದರ ಬಗ್ಗೆ ಒಂದು ಹೇಳಿಕೆ ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳುತ್ತೇನೆ.

Sri A. R. BADARINARAYANA.—Two matters are involved in this particular matter. One is the caning of the students about which perhaps the Hon'ble Chief Minister would be in a position to make a statement. I am not competent to make a statement about it. As regards the enhancement of fees, Government have adopted a pattern of fees and there is no intention to change it. That is all I can say.

ಶ್ರೀ ಕೋಣಂದೂರು ಲಿಂಗಪ್ಪ.—ಫೀಸನ್ನು ಏರಿಸುವ ವಿಷಯದಲ್ಲಿ ತೀರ್ಮಾನ ತೆಗೆದು ಕೊಂಡಿದೆ ಎಂದು ಮಾನ್ಯ ಮುಂತ್ರಿಗಳು ಹೇಳಿದರು. ಬಡಕನದಿಂದ ಜನರು ತೊಳಲುತ್ತಿರುವ ರಾಜ್ಯದಲ್ಲಿ ಶಿಕ್ಷಣ ಶುಲ್ಕವನ್ನು ಏರಿಸುವುದು ಯಾವ ನೀತಿ, ಯಾವ ನ್ಯಾಯ? ಸಮಾಜವಾದವನ್ನು ತರುತ್ತೇವೆಂದು ಹೇಳುವವರು ಮಾಡುವ ಕಾರ್ಯವೇ ಇದು ಎಂದು ನಾನಾದರೂ ಕೇಳಬಯಸುತ್ತೇನೆ.

Sri A. R. BADARINARAYANA.—Madam, he wanted to know what had happened. I am only making a statement of fact. If they want to discuss the matter, they may bring a separate resolution or motion.

Sri V. N. PATIL.—The Education Minister said that Government is not going to reduce the fees. Shall I take it that that is the answer from the Education Minister? The fees which was Rs. 10 has been raised to Rs. 15. Is it not a burden on the students? I want a statement from the Education Minister. He says that he is not prepared to change the pattern.

ಅಧ್ಯಕ್ಷರು.—ಪ್ಯಾಟರ್ನ್ ಬದಲಾಯಿಸುವುದಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಬೇಕಾದರೆ ಬಂದು ಕಳುಹಿಸಿ, ನೋಡೋಣ.

Sri V. N. PATIL.—Is the pattern going to help the students? Is it a just pattern? Are you not going to do injustice to the students by having this pattern? Are the students not entitled to say 'Hell with this pattern'? I would request the Education Minister to reconsider the matter. ಹತ್ತು ರೂಪಾಯಿ ಇದ್ದುದನ್ನು 15 ರೂಪಾಯಿ ಮಾಡಿದ್ದಾರೆ. ಇಂಥದ್ದು ಮಾಡಬಾರದು. ಹೆಚ್ಚು ಮಾಡಿರುವ ದರದಲ್ಲಿ ವಸೂಲು ಮಾಡುವುದಿಲ್ಲ, ಹಿಂದೆ ಇದ್ದಂತೆಯೇ ಮಾಡುತ್ತೇವೆನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು ಎಂದು ಕೇಳುವುದು ನಮ್ಮ ಕರ್ತವ್ಯವಿದೆ, ಕೇಳುತ್ತಿದ್ದೇವೆ.

ಅಧ್ಯಕ್ಷರು.—ನಾವು ಕೇಳಿದ ಹಾಗೆಲ್ಲ ಭರವಸೆಯನ್ನು ಕೊಡುವುದಕ್ಕೆ ಬರುತ್ತದೆಯೇ?

†ಶ್ರೀ ಎಸ್. ಬಂಗಾರಪ್ಪ (ಸೊರಬ) —ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಈ ದಿನದ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ನಿನ್ನೆಯ ದಿವಸ ಕೂಡ ಹುಬ್ಬಳ್ಳಿ ನಗರದಲ್ಲಿ ಹುಡುಗರ ಮೇಲೆ ಕೇನ್ ಚಾರ್ಜ್ ಆಗಿ ಅನೇಕ ಜನರಿಗೆ ಗಾಯಗಳಾಗಿವೆ. ವಿದ್ಯಾರ್ಥಿಗಳನ್ನು ಬೆನ್ನಟ್ಟಿ ಹೋಗಿ ಹೊಡೆದದ್ದು ಏಕೆ? ಫೀ ದರವನ್ನು ಹೆಚ್ಚು ಮಾಡಿದ್ದರ ಬಗ್ಗೆ ಹಿಂದೆ ವಿದ್ಯಾಮಂತ್ರಿಗಳು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟು, ಬೇರೆ ರಾಜ್ಯಗಳಿಗೆ ಹೋಲಿಸಿದರು ನಮ್ಮ ರಾಜ್ಯದಲ್ಲಿ ಫೀ ದರ ಹೆಚ್ಚಲ್ಲ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದರು. ಒಂದು ವೇಳೆ ಕಡಮೆ ದರದಲ್ಲಿ ಫೀ ತೆಗೆದುಕೊಂಡರೆ ಕಾಲೇಜುಗಳಿಗೆ ನಷ್ಟವಾಗುತ್ತಿದ್ದರೆ, ಅವರಿಗೆ ಏನಾದರೂ ತೊಂದರೆ ಆಗಿದ್ದರೆ ಅದನ್ನು ಒಪ್ಪ. ಬಹುದಾಗಿತ್ತು. ಕೆಲವು ಕಾಲೇಜುಗಳು ವಿದ್ಯಾರ್ಥಿಗಳು ಕೊಡತಕ್ಕ ಫೀಸಿನಲ್ಲಿ ಇನ್ನೂ ಹಣವನ್ನು ಮಿಗಿಸುತ್ತಿದ್ದಾರೆ ಎಂದು ಗೊತ್ತಾಗಿದೆ. ಆ ದೃಷ್ಟಿಯಿಂದ ಫೀ ದರದ ಬಗ್ಗೆ ಈಗಲಾದರೂ ರಾಜ್ಯ ಸರ್ಕಾರ ಗಮನ ಕೊಟ್ಟು ಫೀ ದರವನ್ನು ಕಡಮೆ ಮಾಡಬೇಕು.

ಎರಡನೆಯ ವಿಷಯ ನಿರಾಯುಧ ವಿದ್ಯಾರ್ಥಿಗಳನ್ನು ಬೆನ್ನು ಹತ್ತಿ ಹೊಡೆದದ್ದು ಏಕೆ? ಗಾಯವಾಗತಕ್ಕ ರೀತಿಯಲ್ಲಿ ಹೊಡೆದದ್ದು ಏಕೆ ಎನ್ನುವ ವಿಷಯ ಪ್ರಾಮುಖ್ಯವಾದುದು. ಒಂದು ವರ್ಷದ ಹಿಂದೆ ಕೂಡ ಇಂಥದೇ ಘಟನೆಗಳು ನಡೆದಿದ್ದುವು. ಆದರೂ ಸರ್ಕಾರ ಗಮನ ಕೊಡುತ್ತಿಲ್ಲ. ಗುಲ್ಬರ್ಗದಲ್ಲಿ ಮೊನ್ನೆ ದಿವಸ ಹೊಡೆದಿದ್ದಾರೆ, ನಿನ್ನೆಯ ದಿವಸ ಹುಬ್ಬಳ್ಳಿಯಲ್ಲಿ ಹೊಡೆದಿದ್ದಾರೆ. ಹೀಗಾದರೆ ಈ ವಿಷಯದಲ್ಲಿ ಮಕ್ಕಳು ನಮ್ಮನ್ನೆ ಇರುವುದಿಲ್ಲ. ದಯವಾಡಿ ಈ ಮಕ್ಕಳನ್ನು ಹೊಡೆದದ್ದು ಏಕೆ ಎನ್ನುವ ಬಗ್ಗೆ ಹೇಳಿಕೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† Sri C. M. ARUMUGHAM (K.G.F.).—Madam, I am raising a point about the police attitude towards the public in general and the student community in particular. I can say that the attitude of the police has not changed at all from the Britisher's time to the present Chief Minister Sri Devaraj Urs' time. There has been change of Government and they are bent upon changing the society. In the present democratic set up though they are changing the society, they have not given any instructions to change the attitude of the police. The police are behaving in the same fashion as they

were behaving during Britisher's time. Therefore, it is very necessary that there should be a change in the attitude of the police towards the students. The students in Japan change the Government. A day will come when the students here also would change the Government. It is very necessary that the Government should try to understand the problems of the students and help them. What happened in Hubli and Gulbarga will have repercussions; it will have an impact on the Government. The students of today will become the IAS and IPS officers of tomorrow. Like my friend Sri Chennabasappa they may become Public Works Ministers. Some Ministers while addressing a meeting outside or making a statement here say that action will be taken according to law. Dealing with the students is one thing and dealing with the general public is quite another thing. Police men should know how they should behave with the students. If a simple injury is done to an ordinary Constable, immediately the police resort to lathi charge or firing. If any injury is done to a Police Superintendent, immediately they will shoot. I know so many persons who sitting in a jeep give orders to shoot. There are Ministers who sitting in Ambassador cars, pass orders. The Speaker is also having an Ambassador car. I know some police officers using Impala cars and still you talk about socialism. People moving in such cars sit in office and order for lathi charge. Is it in the fitness of things that the police attitude should remain as it was during the Britishers days? If you allow things to continue like this, there will be no change from what it was during the Britishers days? I do agree that there have been some changes in the taluk and village levels. I know during those days roads were constructed only in cities but now things have changed and communication facilities are provided in villages also. But with all these changes in the general set up, there is no change in the attitude of Police. You must see that their attitude also changes according to the modern trend. They must move in the direction wind blows. You cannot make them to break the bones of students or arrest the students and put them behind bars. If you do that, they will cultivate that habit and become a political party and will revolt against you. If the Government has the courage and interest in the student community, you must immediately take action to give exemption of payment of fees. You should not resort to lathi charge. Can such a thing happen anywhere in a civilised country? When students appeal for exemption from payment of fees or reduction of fees, you immediately resort to lathi charge. When the assembly is sitting here, such things are going on. We take a very serious view of this issue and we demand that either the Education Minister or the Chief Minister should furnish to this House information as to how many students were arrested, how many were released and how many times lathi charge was resorted to.

†ಶ್ರೀ ಪೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಸಭೆಯ ಉಪ ನಾಯಕರು ಇದರ ಬಗ್ಗೆ ಮಾತನಾಡಲು ಈಗ ಎದ್ದು ನಿಂತಿದ್ದಾರೆ. ಆದಕ್ಕೆ ಮುಂಚೆ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದರೆ ಅವರು ಈ ವಿಷಯಕ್ಕೂ ಉತ್ತರ ಕೊಡಲು ಸಹಾಯವಾಗುತ್ತದೆ ಎಂದು ತಿಳಿದು ತಮ್ಮ ಗಮನವನ್ನು ಸೆಳೆಯುತ್ತೇನೆ.

ಈಗ ಹುಡುಗರ ಅನ್‌ರೆಸ್ಟ್ ಚಳುವಳಿಗೆ ಪ್ರಾರಂಭವಾಗಿದೆ. ಇದು ಕರ್ನಾಟಕ ಯೂನಿವರ್ಸಿಟಿಗೆ ಸಂಬಂಧಪಟ್ಟಂತೆ ಅಲ್ಲ. ಇದು ಎಲ್ಲಾ ಸ್ಟೂಡೆಂಟ್ಸ್‌ಗೂ ಸಂಬಂಧಪಟ್ಟ ರೀತಿಯಲ್ಲಿ ಚಳುವಳಿ ಶುರುವಾಗಿದೆ. ಗುಲ್ಬರ್ಗಾ, ಬಿಜಾಪುರ ಮತ್ತು ಧಾರವಾಡ ಎಲ್ಲಾ ಕಡೆಯೂ ಈಗ ಚಳುವಳಿ ನಡೆಯುತ್ತಾ ಇದೆ. ನನಗೆ ಗುಲ್ಬರ್ಗಾದಿಂದ ಸುಮಾರು ಹತ್ತಾರು ತಾರುಗಳನ್ನು ಕಳುಹಿಸುತ್ತಾ ಇದ್ದಾರೆ. ನಾನು ಸರ್ಕಾರವನ್ನು ದೂಷಣೆ ಮಾಡಬೇಕು ಎನ್ನುವ ದೃಷ್ಟಿಯಿಂದ ಮಾತನಾಡುತ್ತಾ ಇಲ್ಲ. ಮೊನ್ನೆ ದಿನ ಈ ಸಭೆಯಲ್ಲಿ ಇದರ ಬಗ್ಗೆ ಒಂದು ಸ್ಟಡಿ ಟೀಮನ್ನು ಅತಿ ಜರೂರಾಗಿ ಕಳುಹಿಸಬೇಕು ಎಂದು ಏನು ಒಂದು ನಿರ್ಣಯವಾಗಿತ್ತೋ ಅದು ಇದುವರೆಗೂ ಕಾರ್ಯಗತವಾಗಲಿಲ್ಲಾ. ಈಪೊತ್ತು ಈ ವಿಷಯದಲ್ಲಿ ಎರಡು ವಿಧದ ಬೇಡಿಕೆಗಳು ಇವೆ. (1) ಹುಡುಗರ ಚಳುವಳಿಗೆ ಸಂಬಂಧಪಟ್ಟ ವಿಷಯ, ಏನೆಂದರೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ತೊಂದರೆಗೆ ಈಡಾದಂಥ ಪ್ರದೇಶದಲ್ಲಿ ಹುಡುಗರಿಗೆ ಸೆಕೆಂಡ್ ಟರ್ಮ್ ಫೀಸ್ ಎಕ್ಸೆಮ್ಪ್ಷನ್ ಕೊಡಬೇಕಾದ್ದು.

ಎರಡನೆಯದಾಗಿ ಕೆಲವು ಇನ್ಸ್ಟಿಟ್ಯೂಷನ್‌ಗಳಲ್ಲಿ ಫೀಸ್‌ನ್ನು 100 ರೂಪಾಯಿಗೆ ಏನು ಹೆಚ್ಚು ಮಾಡಿದ್ದಾರೋ ಅದನ್ನು ರಿಡಕ್ಷನ್ ಮಾಡಬೇಕು ಎನ್ನುವ ಬೇಡಿಕೆಯನ್ನು ಸುಮಾರು 4 ತಿಂಗಳಿನಿಂದಲೂ ಹುಡುಗರು ಒಂದೇ ಸಮನೆ ಎಜಿಟೇಷನ್ ಮಾಡುತ್ತಾ ಇದ್ದಾರೆ. ಆದರೆ ಇದರ ಬಗ್ಗೆ ಮಂತ್ರಿಗಳು ಏನು ಒಂದು ಹೇಳಿಕೆ ಕೊಟ್ಟಿದ್ದಾರೆ ಅದು ಕಾರ್ಯರೂಪಕ್ಕೆ ಬರುವದರಲ್ಲಿ ಜನಗಳಿಗೆ ಸಂಶಯ ಉಂಟಾಗಿದೆ. ಈಪೊತ್ತು ಈರೀತಿ ಅನಮೋಧಾನ ಉಂಟಾಗಿರುವುದಕ್ಕೆ ಕಾರಣ ವಿದ್ಯಾರ್ಥಿಗಳಿಗೆ ಶ್ರೀಮಾನ್ ರಾಥೋಡ್‌ರವರು ಬಿಜಾಪುರದಲ್ಲಿ ಒಂದು ಹೇಳಿಕೆ ಕೊಟ್ಟರು ಏನೆಂದರೆ ಹುಡುಗರಿಗೆ ಫೀಸನ್ನು ಮನ್ನಾ ಮಾಡುತ್ತೇವೆ ಎಂದು.

ಶ್ರೀ ಕೆ. ಎಚ್. ಪಾಟೀಲ್.—ಗೌರ್ನಮೆಂಟ್ ಕಾಲೇಜಿನಲ್ಲಿ ಫೀಸ್ ಹೆಚ್ಚಾಗಿಲ್ಲವಲ್ಲಾ.

ಶ್ರೀ ಪೆಚ್. ಡಿ. ದೇವೇಗೌಡ.—ನಾನು ಹೇಳಿದ್ದು ಕೆಲವು ಕಾಲೇಜುಗಳಲ್ಲಿ ಎಂದು ಹೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಅದು ಯೂನಿವರ್ಸಿಟಿ ಕಂಟ್ರೋಲ್‌ನಲ್ಲಿ ಇರುವುದರಿಂದ ಅವರು ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಗೊತ್ತು. ಅದಕ್ಕೆ ನಾನು ಕಾಷನ್ ಆಗಿ ಹೇಳುತ್ತಿದ್ದೇನೆ. ಆದುದರಿಂದಲೇ ಮೊನ್ನೆ ದಿವಸ ಈ ಸಭೆಯಲ್ಲಿ ಆ ಪ್ರದೇಶಗಳಿಗೆ ಒಂದು ಸ್ಟಡಿ ಟೀಮನ್ನು ಕಳುಹಿಸಬೇಕು ಎಂದು ಏನು ಒಂದು ನಿರ್ಣಯವಾಗಿತ್ತೋ ಅದು ಇನ್ನೂ ಆಗಿಲ್ಲ. ಈ ಸ್ಟಡಿ ಟೀಮಿಗೆ ಯಾರು ಯಾರು ಹೋಗುತ್ತಾರೆ ಅನ್ನುವ ಹೆಸರನ್ನು ನೇಮಕ ಮಾಡಬೇಕಾಗಿತ್ತು. ಇನ್ನೂ ಮಾಡಿಲ್ಲ. ನನಗೆ ತಿಳಿದಿರುವ ಪ್ರಕಾರ ಮುಖ್ಯಮಂತ್ರಿಗಳಿಗೆ ನಿನ್ನೆ ಆರೋಗ್ಯ ಸರಿಯಾಗಿರಲಿಲ್ಲ ಎಂದು ಕೇಳಿದ್ದೇನೆ. ಈಪೊತ್ತು ಹೇಗಿದೆಯೋ ಗೊತ್ತಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈಪೊತ್ತು ಆರೋಗ್ಯ ಚೆನ್ನಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮೊನ್ನೆ ದಿವಸ ಈ ಸಭೆಯಲ್ಲಿ ನಿರ್ಣಯವಾಗಿರುವ ಪ್ರಕಾರ ಒಂದು ಸ್ಟಡಿ ಟೀಮನ್ನು ಕಳುಹಿಸಿ. ಅಲ್ಲಿ 3-4 ತಾಲ್ಲೂಕುಗಳಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಕೇಳಿದ್ದೇನೆ. ಮಕ್ಕಳಿಗೆ ಕೊಡಬೇಕಾದ ಸವಲತ್ತುಗಳನ್ನು ಜಾಗ್ರತೆ ಕೊಡಬೇಕು. ಗುಲ್ಬರ್ಗ ಬಿದರ್ ಮತ್ತು ಬಿಜಾಪುರ ಅಲ್ಲಿಯ ಜನಗಳ ಪರಿಸ್ಥಿತಿ ಅರಿತು ಕೊಳ್ಳುವುದಕ್ಕೆ ಅತಿ ಜಾಗ್ರತೆಯಾಗಿ ಈ ನಿರ್ಣಯವನ್ನು ಕೈಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈ ಸಭೆ ಮುಗಿಯುವುದರೊಳಗೇನೇ ಈ ಮನೆಯಲ್ಲಿ ನಿರ್ಣಯವಾಗಿರುವಂತೆ ಜಾಗ್ರತೆ ಒಂದು ಸ್ಟಡಿ ಟೀಮನ್ನು ಕಳುಹಿಸಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ.

ಅಲ್ಲದೆ ಮೊನ್ನೆ ದಿವಸ ಈ ವಿಷಯದ ಬಗ್ಗೆ ಪೋಲೀಸಿನವರ ಪ್ರಸ್ತಾಪ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ಬಗ್ಗೆ ಅವರೊಬ್ಬರೇ ಅಲ್ಲ, ಈ ಮನೆಯ ಉಪನಾಯಕರೂ ಹೇಳುತ್ತಾರೆ, ಎಲ್ಲರೂ ಆ ರೀತಿ ಹೇಳುತ್ತಾರೆ. ಏನೆಂದರೆ ಹುಡುಗರು ಚಳುವಳಿ ಮಾಡಿದಾಗ, ಪಬ್ಲಿಕ್ ಪ್ರಾಪರ್ಟಿಯನ್ನು ಡ್ಯಾಮೇಜ್ ಮಾಡತಕ್ಕಂಥ ಸಂದರ್ಭದಲ್ಲಿ ಸರ್ಕಾರ ಕಣ್ಣುಮುಚ್ಚಿ

ಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಆ ಸಮಯದಲ್ಲಿ ಯಾರಾದರೂ ಆಗಲಿ ಪೋಲಿಸಿನವರ ನೆರವು ಕೇಳಬೇಕಾಗುತ್ತದೆ. ಆದುದರಿಂದ ಅವರು ಇದನ್ನು ಹತೋಟಿಗೆ ತರಲು ರಾತ್ರಿ ಧಾರ್ಜು ಮಾಡಿರುತ್ತಾರೆ ಎಂದು ಹೇಳಿದರು. ಆದರೆ ನನ್ನ ಪ್ರಶ್ನೆ ಏನೆಂದರೆ ಈ ಚಳುವಳಿ ಆ ಮಟ್ಟಕ್ಕೆ ಬಂತೇ ಎನ್ನುವ ವಿಷಯ ಮುಖ್ಯವಾದದ್ದು. ಈ ವಿಷಯದಲ್ಲಿ ನನಗೆ ಹೇಳಬೇಕು. ಅಲ್ಲದೇ ವಾರ ತಿವರದ ಪತ್ರಿಕೆಯಲ್ಲೂ ಕೂಡ ಈ ವಿಷಯವಾಗಿ ಒಂದು ಹೇಳಿಕೆ ಬಂತು. ಒಬ್ಬರು ಮಾಜಿ ಶಾಸಕರು ಆದ ಗೌರವಾನ್ವಿತವಾದ ವ್ಯಕ್ತಿ, ಯಾಗಿರುವವರ ಮನೆಗೆ ನುಗ್ಗಿ, ಅವರ ದೇವರ ಕೋಣೆಗೆ ಹೋಗಿ ಅವರ 12 ವರ್ಷದ ಒಬ್ಬ ಹುಡುಗರನ್ನು ಹಿಡಿದುಕೊಂಡು ರಾತ್ರಿ ಧಾರ್ಜು ಮಾಡಿ ರಕ್ತವಾಂತಿ ಬರುವ ಹಾಗೆ ಹೊಡೆದಿದ್ದಾರೆ. ಶ್ರೀಮಾನ್ ಕೆ. ಹೆಚ್. ಪಾಟೀಲ್‌ರು ಆ ಸ್ಥಳದಲ್ಲಿ ಇದ್ದಾಗಲೇ ಇಂಥಾ ಒಂದು ಪರಿಸ್ಥಿತಿ ಉಂಟಾಗಿದೆ. ಅವಕ್ಕೊಸ್ಕರ ಈ ವಿಷಯವನ್ನು ನಾನು ಪ್ರಸ್ತಾಪಮಾಡಿದೆ. ಇವೊತ್ತು ಪೋಲೀಸ್ ಎಕ್ಸ್‌ಸ್ ಬಳಸುವುದು ರಾಜಕೀಯ ದೃಷ್ಟಿಯಿಂದ ನಡೆಯುವುದಾದರೆ ಈ ಒಂದು ನನ್ನ ವೇದನೆಯನ್ನು ರಾಜಕೀಯಕ್ಕೆ ಬಳಸುವುದಾದರೆ ಪರಿಸ್ಥಿತಿ ಹದಗೆಡುತ್ತದೆ. ರಾಜಕೀಯ ಕ್ಕೋಸ್ಕರ ಮಕ್ಕಳನ್ನು ದುರುಪಯೋಗಪಡಿಸುವುದು ಪಾಪದ ಕೆಲಸ, ಅದು ರಾಜ್ಯದಲ್ಲಿ ಇವೊತ್ತು ನಡೆಯುತ್ತಾ ಇದೆ. ಅದು ನಡೆಯಬಾರದು ಲೆಜಿಸ್ಲೇಚರ್ಸ್ ಹೋಂ ನಲ್ಲಿ ಎಕ್ಸಪೋ 70 ಗಲಭೆಯಲ್ಲಿ ಎಷ್ಟುಜನ ವಿದ್ಯಾರ್ಥಿಗಳು ಅಲ್ಲಿ ಇದ್ದರು ಎಂದು ಗೊತ್ತಿದೆ. ಹೊಸ ಸದಸ್ಯರಿಗೆ ಇದರ ಅನುಭವ ಇಲ್ಲ. ಈ ಸಭೆಯು ವೇದಿಕೆಯಮೇಲೆ ಅಂತ ವಾತುಗಳನ್ನು ಆಡುವುದಕ್ಕೆ ನಾನು ತಯಾರಿಲ್ಲ. ಇವೊತ್ತು ಮಕ್ಕಳಮೇಲೆ ಯಾವುದೇ ಒಂದು ಸನ್ನಿವೇಶ ವಿಕೋಪಕ್ಕೆ ಕೋದರೂ ಕೂಡ ತಾವು ಮತ್ತು ಅಧಿಕಾರಿಗಳು ಬಹಳ ಎಚ್ಚರಿಕೆಯಿಂದ ವರ್ತಿಸಬೇಕಾಗುತ್ತದೆ. ಇವೊತ್ತು ಸಾಧ್ಯವಾದಮಟ್ಟಿಗೆ ಮಕ್ಕಳ ಬಗ್ಗೆ ಅನುಕಂಪ ಇರಬೇಕು. ಶ್ರೀಮಾನ್ ಚೆನ್ನಬಸಪ್ಪನವರ ಮಕ್ಕಳು, ನಮ್ಮ ಮಕ್ಕಳು ಎಲ್ಲರೂ ವಿದ್ಯಾರ್ಥಿಗಳು ಒಂದೇ. ಅವರ ಎಲ್ಲಾ ಬೇಡಿಕೆಗಳನ್ನು ಸರ್ಕಾರ ಈಡೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಅದನ್ನು ಸಮರ್ಥಿಸಿ ಮಾಡುವುದಕ್ಕೆ ಹೋಗುವುದಿಲ್ಲ. ಬೇಡಿಕೆಗಳನ್ನು ಪರಿಶೀಲನೆ ಮಾಡತಕ್ಕ ಕಾಲದಲ್ಲಿ ಶಾಂತರೀತಿಯಿಂದ ಮಾಡುವ ಚಳುವಳಿ ಬಗ್ಗೆ ಏನು ಇದೆ ಅಥವಾ ಹತ್ತಿಕ್ಕುವುದಕ್ಕೆ ಪೋಲೀಸನ್ನು ಪ್ರಯೋಗಮಾಡುವುದಾದರೆ ಜೇನುಗೂಡಿಗೆ ಬೆರಳು ಇಟ್ಟರೆ ಏನಾಗುತ್ತದೆ, ಪರಿಸ್ಥಿತಿ ಉಲ್ಬಣಗೊಳ್ಳುತ್ತದೆ. ಆ ರೀತಿ ಪರಿಸ್ಥಿತಿ ವಿಕೋಪಕ್ಕೆ ಹೋಗುವುದಕ್ಕೆ ಮುಂಚೆ ನಿರ್ಣಯ ತೆಗೆದುಕೊಳ್ಳಬೇಕು. ಖಾಸಗಿ ಕಾಲೇಜಿನವರು ಸರ್ಕಾರದ ನಿಯಮಗಳಿಗೆ ಹದ್ದುಮೀರಿ 100 ರೂಪಾಯಿ ಶುಲ್ಕವನ್ನು ವಿಧಿಸಿದ್ದಾರೆ. ಸಮ್ಮತಿಯ ಮಾವಳಿಗಳನ್ನು ಹದ್ದುಮೀರಿ ಮಾಡಿದ್ದಾರೆ ಹಲವಾರು ಕಾರಣಗಳಿಂದ ಅವರಮೇಲೆ ಹತೋಟಿ ಇಟ್ಟುಕೊಳ್ಳುವುದಕ್ಕೆ ಸರ್ಕಾರಕ್ಕೆ ಶಕ್ತಿ ಇದೆ. ಸರ್ಕಾರ ನಿಶ್ಯಕ್ತವಾಗಿಲ್ಲ. ಆರು ತಿಂಗಳಿಂದ ಒಂದೇ ಸಮನೆ ಅವರ ಬೇಡಿಕೆ ಏನು ಇದೆ ಅವುಗಳ ಮೇಲೆ ಅಂತಿಮ ನಿರ್ಣಯ ತೆಗೆದುಕೊಳ್ಳುವುದಕ್ಕೆ ಸರ್ಕಾರ ಅಷ್ಟೊಂದು ಮುಂದುವರಿಸಬಾರದು ಎಂದು ಹೇಳುತ್ತೇನೆ. ಈ ಸಭೆಯಲ್ಲಿ ಐದುನೂರು ರೂಪಾಯಿ ತಂದೆತಾಯಿಗಳ ವರಮಾನ ಇರುವ ಮಕ್ಕಳಿಗೆ ರಿಯಾಯಿತಿ ಕೊಡಬೇಕು ಎನ್ನುವ ನಿರ್ಣಯ ತೆಗೆದುಕೊಂಡಿದ್ದೀರಿ. ಅದನ್ನು ಯಾವ ಯಾವ ಭಾಗದಲ್ಲಿ, ಯಾವ ಯಾವ ಪ್ರದೇಶಗಳಿಗೆ ಈ ಫೆಸಿಲಿಟೀಸ್ ಎಕ್ಷಟೆಂಡ್ ಮಾಡುವುದಕ್ಕೆ ಸಾಧ್ಯವಿದೆ ಅದರ ಬಗ್ಗೆ ಅಂತಿಮ ನಿರ್ಣಯ ಆಗಬೇಕು. ಗುಲ್ಬರ್ಗಾದಲ್ಲಿ ಕೆಲವು ಮಕ್ಕಳು ಸೈಕಿಕ್ ಮಾಡುತ್ತಿದ್ದಾರೆ. ಕೇವಲ 5 ನೂರು ರೂಪಾಯಿ ವರಮಾನದ ಗೊಂದಲ ಎಬ್ಬಿಸುವುದು ಬೇಡ. ಎಲ್ಲರಿಗೂ ಕೊಡುಬಹುದು ಮುಂದುವರಿಸುತ್ತೇವೆ ಎಂದು ಹೇಳಿದ್ದೀರಿ. ಬಡವರಿಗೆ ಇನ್‌ಕಮ್ ಸರ್ಟಿಫಿಕೇಟ್ ಪಡೆಯುವುದಕ್ಕೆ ಕಷ್ಟ. ತಹಸೀಲ್ದಾರ 500 ರೂಪಾಯಿ ಇನ್‌ಕಮ್ ಸರ್ಟಿಫಿಕೇಟ್ ಕೊಡಬೇಕು ಎಂದರೆ 10—20 ರೂಪಾಯಿ ಖರ್ಚಾಗುತ್ತದೆ ಬೇರೆ. ಜೊತೆಗೆ ಅನಾವಶ್ಯಕವಾಗಿ ಕಾಲ ಹಿಡಿಯುತ್ತದೆ. ಬಡವರ ಮಕ್ಕಳಿಗೆ ನುಲುಖಾವಾಗಿ ಇನ್‌ಕಮ್ ಸರ್ಟಿಫಿಕೇಟ್ ಸಿಕ್ಕುವುದಿಲ್ಲ. ಬೇಡಿಕೆಗಳನ್ನು ಈಡೇರಿಸುವುದಕ್ಕೆ ಅತಿ ಜರೂರಾಗಿ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು. ಪೋಲೀಸ್ ಅಧಿಕಾರಿಗಳಿಗೆ ಸೂಚನೆಕೊಡಬೇಕು ಮಕ್ಕಳಬಗ್ಗೆ ಕನಿಕರ ಮನೋಭಾವನೆಯಿಂದ ಕೂಡಿರತಕ್ಕ ವರ್ತನೆ ಇಟ್ಟುಕೊಳ್ಳಬೇಕು ಎಂದು. ಇನ್ನು ಗುಲ್ಬರ್ಗಾದಲ್ಲಿ ನಡೆದಂತ ಘಟನೆಬಗ್ಗೆ ಪಬ್ಲಿಕ್ ಪ್ರಾಪರ್ಟಿ ಏನೇನು ಡ್ಯಾಮೇಜ್ ಆಗಿದೆ ವಿವರಣೆ ಒದಗಿಸಬೇಕು ಎಂದು ಕೇಳಿದ್ದೆ. ಪೋಲೀಸ್ ಎಕ್ಸಸ್ ಬಗ್ಗೆ ಮಾಜಿ ಶಾಸಕರ ಅವರ ಮನೆ ದೇವರ ಕೋಣೆಗೆ ಹೋಗಿ ಮಕ್ಕಳನ್ನು ಹೊಡೆದು ರಕ್ತ ಬಿದ್ದಿರತಕ್ಕ ಬಗ್ಗೆ ಪ್ರಸ್ತಾಪಮಾಡಿರುವುದು ಏನು ಇದೆ ಅದನ್ನು ಸಭೆಯಲ್ಲಿ ತಿಳಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ.

ಶ್ರೀ ಕೋಣಂದೂರು ನಿಂಗಪ್ಪ.—ವಿದ್ಯಾರ್ಥಿಗಳ ಬಗ್ಗೆ ಹುಬ್ಬಳ್ಳಿಯಲ್ಲಿ ಹಿಂಸಾತ್ಮಕ ಕೃತ್ಯ ಆಚರಿಸುತ್ತಿರುವ ಬಗ್ಗೆ ಎರಡುಮಾತು ಸಂಕ್ಷಿಪ್ತವಾಗಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ಈಗ ಹೇಳಿರುವುದು ಸಾಲದೆ? ಶ್ರೀಮಾನ್ ಆರ್ಮುಗಂರವರು 10 ನಿಮಿಷ, ಶ್ರೀಮಾನ್ ದೇವೇಗೌಡರು ಅರ್ಧಗಂಟೆ ಹೇಳಿದ್ದಾರೆ ನೀವು ಅದಕ್ಕೆ ಪುಷ್ಟಿ ಕೊಡುವುದಕ್ಕೆ ಹೇಳುತ್ತೀರಾ?

ಶ್ರೀ ಎಸ್. ಪೈ. ಪಾಟೀಲ್.—ಈಗ ನಾವು ಹೇಳುವ ಮತ್ತು ಕೇಳುವ ಸ್ಥಿತಿಯಲ್ಲಿ ಇಲ್ಲ. ಬಿಜಾಪುರ ಜಿಲ್ಲೆ ಉತ್ತರಭಾಗದ ಜನರ ಸ್ಥಿತಿ ಏನು ಕಲ್ಪನೆ ಮಾಡಿದರೂ ತಾವು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ನಾವು ಹೇಳುವುದು ಕೇಳಿರಿ.

ಅಧ್ಯಕ್ಷರು.—ಇಲ್ಲಿ ನಡೆಯುತ್ತಾ ಇರುವುದು ಹುಬ್ಬಳ್ಳಿ ವಿಚಾರ. ಗುಲ್ಬರ್ಗಾದ್ದಲ್ಲ. ಮಾನ್ಯ ಬಂಗಾರಪ್ಪನವರ ನಿಲುವಳಿ ಸೂಚನೆ ಬಗ್ಗೆ ಚರ್ಚೆ ನಡೆಯುತ್ತಿದೆ.

ಶ್ರೀ ಎಸ್. ಪೈ. ಪಾಟೀಲ್.—ಅದರ ಬಗ್ಗೆ ನಾನು ಹೇಳುವುದಿಲ್ಲ. ಬಿಜಾಪುರದ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು.—ಆದನ್ನು ಆಮೇಲೆ ಹೇಳಬಹುದು.

† ಶ್ರೀ ಪಾಟಾಳ್ ನಾಗರಾಜ್.—(ಚಾಮರಾಜ್‌ಪೇಟೆ).—ಮೂರು ದಿವಸಗಳಿಂದ ಬರಗಾಲ ಪ್ರದೇಶಗಳಲ್ಲಿ ಏನು ಅನ್ಯಾಯವಾಗಿದೆ ಎಂದು ಹೇಳುತ್ತಿದ್ದರೂ ಹುಬ್ಬಳ್ಳಿಯಲ್ಲಿ ಈಗ ವಿದ್ಯಾರ್ಥಿಗಳ ಮೇಲೆ ಪೋಲೀಸಿನವರ ಪಾಶವೀಕೃತ್ಯ ನಡೆದಿದೆ. ಅದರ ಬಗ್ಗೆ ಮಾನ್ಯ ಅಧ್ಯಕ್ಷರ ಮೂಲಕ ಕೆಲವು ಮಾತನ್ನು ಹೇಳಬಯಸುತ್ತೇನೆ. ರಾಜಕೀಯ ಮಾಡಬೇಕು ಎನ್ನುವ ಉದ್ದೇಶ ನನಗಂತೂ ಇಲ್ಲ. ಇಂತಹ ಒಂದು ಪ್ರಶ್ನೆ ತೆಗೆದುಕೊಂಡು ಸರ್ಕಾರದ ಮೇಲೆ ರಾಜಕೀಯ ಮಾಡುವ ಉದ್ದೇಶವಿಲ್ಲ. ನಿಮ್ಮ ಪಕ್ಕದಲ್ಲಿ ಕೂತಿರತಕ್ಕ ಹಿರಿಯರಾದ ಶ್ರೀಮಾನ್ ಚೆನ್ನಬಸಪ್ಪನವರು, ಶ್ರೀಮಾನ್ ಸಿದ್ದವೀರಪ್ಪನವರು ಅವರು ಆಡಳಿತಕ್ಕೆ ಬಂದರೆ ದೇಶದಲ್ಲಿ ಎಲ್ಲವನ್ನು ಸುಗಮವಾಗಿ ನೆರವೇರಿಸುತ್ತೇವೆ, ಎಲ್ಲೂ ತೊಂದರೆಯಾಗದ ರೀತಿ ನೋಡಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದರು. ಅವರ ಜೊತೆಯಲ್ಲಿ ಕೂತುಕೊಂಡು ನಾನು ಧ್ವನಿ ಗೂಡಿಸಿ ಕೇಳಿದ್ದೇನೆ. ಹಿಂದೆ ಬೆಂಗಳೂರು ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಗಳು ಸ್ಟ್ರೈಕ್ ನಡೆದಾಗ ಶ್ರೀಮಾನ್ ವೀರೇಂದ್ರ ಪಾಟೀಲ್ ಸರ್ಕಾರದ ನಡವಳಿಕೆಯನ್ನು ಕಟುವಾಗಿ ಹೇಳಿದರು. ಇದೇ ಚೆನ್ನಬಸಪ್ಪನವರು, ಸಿದ್ದವೀರಪ್ಪನವರು ಇದೇ ಕೆ. ಎಚ್. ಪಾಟೀಲರು ಏನು ಆಗ ಹೇಳುತ್ತಿದ್ದರು ಎನ್ನುವುದನ್ನು ನೋಡಿದ್ದೇನೆ. ಅವರ ಸರ್ಕಾರ ಹೋಗಿ ನಿಮ್ಮ ಸರ್ಕಾರ ಬಂದರೆ ಬಂದೂಕ, ರಾತಿ ಎಲ್ಲವೂ ಪೋಲೀಸ್ ಕೈಯಿಂದ ಹೋಗಬಹುದು, ನ್ಯಾಲ್ಟ್ ಟಬದರಾವಣೆಯಾಗಬಹುದು ಈ ಎರಡೂ ಆಯುಧಗಳನ್ನು ಪೋಲೀಸರ ಕೈಯಿಂದ ಬಿಡಿಸಬಹುದು ಎಂದು ತಿಳಿದುಕೊಂಡಿದ್ದೆ. ಆದರೆ ಹುಬ್ಬಳ್ಳಿಯಲ್ಲಿ ಪೋಲೀಸರ ಅಟ್ರಾಸಿಟಿ, ಆಗಿರತಕ್ಕ ಅನ್ಯಾಯ ನೋಡಿದರೆ ಅವರಿಗಿಂತ ಒಂದು ಕೈ ನೀವು ಮುಂದೆ ಹೋಗಿದ್ದೀರಿ. ಶ್ರೀಮಾನ್ ಶಿವಣ್ಣನವರನ್ನು ಅಭಿನಂದಿಸುತ್ತೇನೆ. ಮಿಕ್ಕವರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ವಿದ್ಯಾರ್ಥಿಗಳು ಚಳುವಳಿ ಬಂದಾಗ ಅವರ ಎದುರು ನಿಂತು ಅವರಿಗೆ ಆಶ್ವಾಸನೆ ಕೊಟ್ಟಿದ್ದಕ್ಕೆ ಅವರ ಧೈರ್ಯಕ್ಕೆ, ಅವರ ಗಂಡಸ್ತನಕ್ಕೆ ಅಪ್ರಿಷಿಯೇಟ್ ಮಾಡುತ್ತೇನೆ.

ವಿದ್ಯಾರ್ಥಿಗಳು ನಮಗೆ ಅನ್ಯಾಯವಾಗಿದೆ ಎಂದು ಹೇಳಿದ ತಕ್ಷಣ, ಧೈರ್ಯದಿಂದ ಸರ್ಕಾರವನ್ನು ಕೇಳಿಯೋ ಕೇಳದೆಯೋ ಆಶ್ವಾಸನೆ ನೀಡಿದರು. ಮಾನ್ಯ ಕೆ. ಎಚ್. ಪಾಟೀಲರು ಹೋದಾಗ, ನಾನು ಶಿವಣ್ಣ ಕೆಟ್ಟುಹೋಗಿದ್ದೇನೆಯೇ; ನಾನು ಕೆ. ಎಚ್. ಪಾಟೀಲ್ ಎಂದು ಉದ್ಗಾರವಾದ ಮಾತು ಅಡಿದ್ದು ವಿದ್ಯಾರ್ಥಿಗಳು ಕೆರಳುವುದಕ್ಕೆ ಕಾರಣವಾಯಿತು. ಇದಕ್ಕೆ ಮಾನ್ಯ ಕೆ. ಎಚ್. ಪಾಟೀಲರೇ ಕಾರಣ.

2-30 P.M.

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರು ತಮಗೆ ಬಂದ ವರದಿಯ ಮೇಲೆ ಹೀಗೆಲ್ಲಾ ಮಾತನಾಡಿದರೆ, ನಾನು ನಾಗರಾಜ್ ಅವರೇ ಪ್ರಚೋದನೆಯನ್ನು ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. This not the way of tackling the matter.

ಶ್ರೀ ಎಸ್. ಬಂಗಾರಪ್ಪ.—ನಾಗರಾಜ್ ಅವರು ಕಾರಣರು ಆಗಿದ್ದರೆ ಆ ರೀತಿ ಹೇಳುವುದು ಒಳ್ಳೆಯದು.

ಶ್ರೀ ಬಾಪೂಗೌಡ ರಾಯಪ್ಪ (ಶಹಪುರ).—ನಾನು ಅಲ್ಲದ್ದಂಥ ಕಾಲಕ್ಕೆ ಮಾನ್ಯ ಕೆ. ಎಚ್. ಪಾಟೀಲರು ಹೇಳಿದ ಮಾತು ಅದು.

ಶ್ರೀ ಡಿ. ದೇವರಾಜ್ ಅರಸ್.—ನೀವು ಅಲ್ಲದ್ದು ಏನು ಮಾಡಿದ್ದೀರಿ ಎಂದು ನನಗೆ ವರದಿ ಬಂದಿದೆ. ಅವರು ಬಾರದೆ ಇದ್ದಾಗ ಏನು ಮಾಡಿದ್ದೀರಿ ಎಂದೂ ಸಹ ನನ್ನ ಹತ್ತಿರ ವರದಿ ಇರುತ್ತದೆ. ಮಾನ್ಯ ಕೆ. ಎಚ್. ಪಾಟೀಲರು ಏನು ಹೇಳಿದರು, ಓಟ್ಟರು ಎನ್ನುವ ವರದಿಯ ಮಾತು ಬೇಡ. ಹುಬ್ಬಳ್ಳಿಯ ಬಗ್ಗೆ ಏನು ವಿಚಾರ ಇದೆ, ಏನು ಕಾರಣುತ್ತದೆ, ಅದನ್ನು ದಯಮಾಡಿ ತಿಳಿಸಿ, ನಾನು ಬೇಡ ಎಂದು ಹೇಳುವುದಿಲ್ಲ ಅವರು ಹಾಗೆ ಹೇಳಿದರು, ಇವರು ಹಾಗೆ ಹೇಳಿದರು ಎಂದು ಮಾತನಾಡುತ್ತಾ ಹೋಗುವುದು ಬೇಡ. ನಾನು ವಿವರಣೆ ಮಾಡಿಕೊಳ್ಳುವುದು ಇಷ್ಟೆ, ನನಗೆ ಎಷ್ಟೋ ವರದಿಗಳು ಬಂದಿವೆ ಎಂದು ಹೇಳುತ್ತಾ ಹೋಗುವುದು ಉಚಿತವಲ್ಲ, ಅದು ಬೇಡ.

ಶ್ರೀ ಪಾಟೀಲ್ ನಾಗರಾಜ್.—ನಾವು ಪ್ರಕಟವಾಗಿರುವ ವರದಿಯ ಮೇಲೆ ಮಾತನಾಡುವುದು, ಮಂತ್ರಿಗಳ ಹಾಗೆ ಕಾರು, ಪ್ರೈವೇಟ್ ಸೆಕ್ರೆಟರಿ ಇಟ್ಟುಕೊಂಡು ವರದಿಯನ್ನು ತರಿಸಿಕೊಳ್ಳುವುದಕ್ಕೆ ನಮ್ಮಿಂದ ಆಗುತ್ತದೆಯೇ? ನೀವೂ ಕೂಡ ಖುದ್ದು ಹೋಗಿ ನೋಡುವುದಿಲ್ಲ: ಪೋಲೀಸ್ ಅಧಿಕಾರಿಗಳು ವರದಿ ಕೊಡುತ್ತಾರೆ ಅದನ್ನು ನಡೆಯಲ್ಲಿ ತಾವು ಓದುತ್ತೀರಿ.

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮನ್ನು ಪೋಲಿಸ್ ಮಿನಿಸ್ಟರ್ ಮಾಡಿದರೆ, ನೀವೂ ಸಹ ಅಧಿಕಾರಿಗಳು ಕೊಟ್ಟ ವರದಿಯ ಮೇಲೆ ಮಾತನಾಡುತ್ತೀರಿ.

ಶ್ರೀ ಪಾಟೀಲ್ ನಾಗರಾಜ್.—ಸ್ವಲ್ಪ ಬದಲಾವಣೆಯಾಗುತ್ತದೆ- ನನಗೆ ಅವಕಾಶ ಕೊಡಿ;

ಶ್ರೀ ಡಿ. ದೇವರಾಜ್ ಅರಸ್.—ಅವಕಾಶ ಕೊಡುತ್ತೇವೆ.

ಶ್ರೀ ಪಾಟೀಲ್ ನಾಗರಾಜ್.—ಯಾವಾಗ ಕೊಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೂ ಕಾಲ ಬರಬೇಕು, ನಮ್ಮ ಪಾರ್ಟಿಗೆ ಸೇರಿಕೊಳ್ಳಿ, ಆಮೇಲೆ ಮಾತನಾಡಿ.

ಶ್ರೀ ಪಾಟೀಲ್ ನಾಗರಾಜ್.—ನಮ್ಮ ಪಾರ್ಟಿಗೆ ನೀವೆ ಸೇರಬೇಕೋ, ನಿಮ್ಮ ಪಾರ್ಟಿಗೆ ನಾವೇ ಸೇರಬೇಕೋ ಆಮೇಲೆ ಆಲೋಚನೆ ಮಾಡೋಣ. ನಾನು ಇದನ್ನು ಲುಘುವಾಗಿ ತೆಗೆದುಕೊಳ್ಳುತ್ತೇನೆ ಎನ್ನುವ ಪ್ರಶ್ನೆಯಲ್ಲ. ಪೋಲೀಸ್ ಅಧಿಕಾರಿಗಳ ವರದಿಯ ಪ್ರಕಾರ ತಾವು ನಿರ್ಣಯ ಮಾಡುವುದಕ್ಕೆ ಹೋಗಬೇಡಿ. ಅಲ್ಲಿ ನಿಜವಾಗಿ ದುರಂತ ನಡೆದಿದೆ, ಮನೆಗಳನ್ನು ನುಗ್ಗಿದ್ದಾರೆ, ಹೋಟೆಲುಗಳಿಗೆ ನುಗ್ಗಿದ್ದಾರೆ, ಕಾಲೇಜುಗಳಿಗೆ ನುಗ್ಗಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ (ಲೋಕೋಪಯೋಗಿ ಶಾಖೆಯ ರಾಜ್ಯ ಮಂತ್ರಿಗಳು).—ನೀವು ಅಲ್ಲಿಗೆ ಹೋಗಿಲ್ಲ, ಇಲ್ಲೇ ಇದ್ದೀರಿ.

ಶ್ರೀ ಪಾಟೀಲ್ ನಾಗರಾಜ್.—ವಿದ್ಯಾರ್ಥಿಗಳು ನಮಗೆ ಫೋನ್ ಮಾಡುತ್ತಾರೆ, ಟೆಲಿಗ್ರಾಂ ಮಾಡುತ್ತಾರೆ, ನಾನು ಪೋಲೀಸ್ ವರದಿಯನ್ನು ನಂಬುವುದಿಲ್ಲ; ಜನಗಳ ವರದಿಯನ್ನು ನಂಬುತ್ತೇನೆ. ನಾಲ್ಕು ಜನ ಪೋಲೀಸರಿಗೆ ತೊಂದರೆಯಾಯಿತು ಎಂದರೆ, ವಿದ್ಯಾರ್ಥಿಗಳು ಪೋಲೀಸರ ಮೇಲೆ ಬಿದ್ದರು, ವಿದ್ಯಾರ್ಥಿಗಳಿಂದ ಪೋಲೀಸರಿಗೆ ಏಟು ಆಯಿತು ಆದ್ದರಿಂದ ಪೋಲೀಸರು ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜು ಮಾಡಿದರು ಎನ್ನುವುದನ್ನು ಸ್ವಾತಂತ್ರ್ಯ ಬಂದ ರಾಗಾಯಿತು ಹೇಳಿಕೊಂಡು ಬಂದಿದ್ದೀರಿ.

ಅಧ್ಯಕ್ಷರು.—ತಾವೂ ಇಲ್ಲೇ ಇದ್ದೀರಿ.

ಶ್ರೀ ಪಾಟೀಲ್ ನಾಗರಾಜ್.—ನರ್ಕಾರದವರಿಗೆ ಖಾಸಗೀ ಕಾಲೇಜುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಪರಿಸ್ಥಿತಿಯನ್ನು ಪೋಲೀಸರು ದುರುಪಯೋಗ ಪಡಿಸಿಕೊಂಡು ಸರಿಯಾದ ರೀತಿಯಲ್ಲಿ ವರ್ತನೆ ಮಾಡದೆ ಇರುವುದು ಈ ಚಳುವಳಿಗೆ ಕಾರಣವಾಗಿದೆ. ಅದು ಇವತ್ತೇ ನಿಲ್ಲುತ್ತದೆ ಎಂದು ನನಗನ್ನಿಸುವುದಿಲ್ಲ. ನಿಮಗೆ ಏನು ವರದಿ ಬಂದಿದೆಯೋ ಅದನ್ನು ನಮ್ಮ ಮುಂದೆ ಇಡಬೇಕು, ಅದು ಪೋಲೀಸ್ ವರದಿಯಾಗದೆ ಸಕ್ಸೆಂತೆದಿಂದ ಕೂಡಿರಬೇಕು. ಪೋಲೀಸರು ಯಾರು ಯಾರು ಅನ್ಯಾಯ ಮಾಡಿದ್ದಾರೆ, ಯಾವ ಅಧಿಕಾರಿಗಳಿಂದ ಅನ್ಯಾಯವಾಗಿದೆ ಅವರನ್ನು ಸಸ್ಪೆಂಡ್ ಮಾಡಬೇಕು. ಮುಖ್ಯಮಂತ್ರಿಗಳು ಗೃಹಸಚಿವರಾಗಿದ್ದಾರೆ. ಪೋಲೀಸರು ವಿದ್ಯಾರ್ಥಿಗಳ ಮೇಲೆ ಉದ್ದೇಶಪೂರ್ವಕವಾದ ಕೇಸುಗಳನ್ನು ಹಾಕುತ್ತಾರೆ. ಚಾರ್ಜ್‌ಷೀಟು ಹಾಕತಕ್ಕಂಥಾದ್ದು ಇವತ್ತಿನವರೆಗೂ ನಡೆದು ಬಂದಿದೆ. ನನ್ನ ಮೇಲೆ ನೂತ್ತಾರು

(ಶ್ರೀ ವಾಟಾಳ್ ನಾಗರಾಜ್)

ಕೇಸುಗಳನ್ನು ಹಾಕಿದ್ದಾರೆ. ಹುಬ್ಬಳ್ಳಿಯ ಗಲಭೆಯಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸರು ನಡೆಸಿರುವಂತಹ ಅನ್ಯಾಯ, ಅಕ್ರಮ, ಅತ್ಯಾಚಾರವನ್ನು ಈ ಸಭೆಯಲ್ಲಿ ಖಂಡಿಸುತ್ತೇನೆ. ಮತ್ತು ಈ ವಿಷಯವಲ್ಲಿ ನೂಚನೆ ಚರ್ಚೆಗೆ ಅವಕಾಶ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಎಚ್. ಎಂ. ಚೆನ್ನಬಸಪ್ಪ.— ಅಧ್ಯಕ್ಷಣಿಯವರೇ, ಈಗ ಸುಮಾರು ಅರ್ಧ ಗಂಟೆಗಿಂತ ಮೇಲ್ಪಟ್ಟು ಅನೇಕ ಸದಸ್ಯರು, ಪೋಲೀಸರು ವಿದ್ಯಾರ್ಥಿಗಳ ಮೇಲೆ ಪ್ರಹಾರ ಕೈಗೊಂಡಿದ್ದಾರೆ ಎನ್ನುತಕ್ಕ ವಿಚಾರದಲ್ಲಿ ಮಾತನಾಡಿದರು. ಇದರ ಜೊತೆಗೆ ನಾವಗಳು ಬಹಳ ನಿರ್ದಯರಾಗಿದ್ದೇವೆ ಎಂದೂ ಸಹ ಹೇಳಿದರು. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಒಂದು ಅಂಶವನ್ನು ತಿಳಿಸಬೇಕಾಗಿದೆ, ಏನೆಂದರೆ, ವಿದ್ಯಾರ್ಥಿಗಳ ವಿಷಯದಲ್ಲಿ ನಮಗೆಷ್ಟು ಅನುಕಂಪ ಇದೆಯೋ ಅದಕ್ಕಿಂತಲೂ ಮಿಗಿಲಾದ ಅನುಕಂಪ ನಮಗೆ ಇದೆಯೆಂದು ಇಲ್ಲಿ ಸ್ಪಷ್ಟಪಡಿಸುತ್ತೇನೆ. ವಿದ್ಯಾರ್ಥಿಗಳು ಮುಂದೆ ಸತ್ಪ್ರಜೆಗಳಾಗಬೇಕು ಎನ್ನುವ ವಿಷಯದಲ್ಲಿ ನಮಗೆಷ್ಟು ಅಭಿಮಾನ ಇದೆಯೋ ಅದಕ್ಕಿಂತ ನೂರು ಪಟ್ಟು ಅಭಿಮಾನ ನಮಗೆ ಇದೆಯೆಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಟಿಯರ್‌ಗ್ಯಾಸ್‌ನಿಂದ ಸತ್‌ಪ್ರಜೆಗಳನ್ನಾಗಿ ಮಾಡುವುದು ರೀತಿಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ವಿದ್ಯಾರ್ಥಿಗಳಿಗೆ ಅನೇಕ ಸಮಸ್ಯೆಗಳು ಬರುತ್ತವೆ. ಬಂದಂಥ ಸಮಸ್ಯೆಗಳನ್ನು ವಿದ್ಯಾರ್ಥಿಗಳೇ ಪರಿಹಾರ ಮಾಡಿಕೊಳ್ಳುವುದು ಯೋಗ್ಯ.

ಶ್ರೀ ಕೋಣಂದೂರು ಲಿಂಗಪ್ಪ.— ವಿದ್ಯಾರ್ಥಿಗಳೇ ಎಂದರೆ ಹೇಗೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸಮಸ್ಯೆಗಳು ವಿದ್ಯಾರ್ಥಿಗಳಿಗೂ ಬರುತ್ತವೆ, ಎಲ್ಲಾ ಕ್ಷೇತ್ರಗಳಲ್ಲೂ ಉದ್ಭವವಾಗುತ್ತವೆ. ಪ್ರಜಾನತ್ತೆಯಲ್ಲಿ ಉದ್ಭವವಾದಂಥ ಸಮಸ್ಯೆಗಳನ್ನು ವಿದ್ಯಾರ್ಥಿಗಳೇ ಪರಿಹಾರ ಮಾಡಿಕೊಳ್ಳುವುದು ಪ್ರಜಾನತ್ತೆಯ ಅಂಗ. ಒಂದು ವೇಳೆ ಕೆಲವು ಸಮಸ್ಯೆಗಳು, ವಿದಿನಿಯಮಗಳಿಗೆ ವಿರೋಧವಾಗಿದ್ದರೆ ಇರುವಾಗ, ಸತ್ಯಾಗ್ರಹ ನಡೆಸತಕ್ಕ ಕೆಲವು ಪಾರ್ಟಿಗಳಿವೆ. ಪತ್ರಿಕೆಗಳಲ್ಲಿ ನಾವೂ ಓದಿದ್ದೇವೆ, ನೀವು ಓದಿದ್ದೀರಿ, ಎಲ್ಲಾ ಜನರು ಬರತಕ್ಕಂಥ ಹೋರ್ಡಿಂಗ್ ನ್ಯಾಷನಲ್ ಸ್ಕೈವೇನಲ್ಲಿ ಕಡ್ಡಿ ಮಾಡಿ, ವಿದಿ ನಿಯಮಕ್ಕೆ ವಿರೋಧವಾಗಿ ನಡೆದ ಪಕ್ಷದಲ್ಲಿ ಎನು ಮಾಡಬೇಕು ?

ಶ್ರೀ ವಾಟಾಳ್ ನಾಗರಾಜ್.—ತಾವು ಬಂಗಾಳದಲ್ಲಿ ಮಂತ್ರಿಗಳಾಗಿ ಇರಬೇಕಾಗಿತ್ತು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇವಕ್ಕೆಲ್ಲಾ ಒಂದು ಕ್ರಮ ಇದೆ. ವಿದ್ಯಾರ್ಥಿಗಳನ್ನು ಪೋಲೀಸರು ಹೊಡೆದು ಬಿಡುತ್ತಾರೆ, ಅವರ ಮೇಲೆ ನಿರ್ದಯವಾಗಿ ವ್ಯವಹರಿಸುತ್ತಾರೆ ಎಂದು ನಮ್ಮನ್ನೆ ಅವರು ಇಷ್ಟು ಹೇಳಿದ್ದರ ಮೇಲೆ ವಿಚಾರ ಮಾಡತಕ್ಕದ್ದು ಅಲ್ಲ. ಪತ್ರಿಕೆಗಳಲ್ಲೂ ಕೂಡ ಬರೆಯುವಾಗ ಯಾವ ಯಾವ ಕಡೆಯಿಂದ ವರ್ತಮಾನ ಬರುತ್ತದೆ ಅದರ ಮೇಲೆ ಬರೆಯುತ್ತಾರೆ ಸರ್ಕಾರದವರೂ ಕೂಡ ವಿದ್ಯಾರ್ಥಿಗಳು ವಿರು ನಿಯಮಗಳಿಗೆ ವಿರುದ್ಧವಾಗಿ ಹೋಗಿದ್ದಾರೆಯೇ ಎನ್ನುವ ಬಗ್ಗೆ ವಿಚಾರ ಮಾಡುತ್ತಾರೆ. ನೀವು ಹೇಳಿದ್ದರೂ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಏನೇ ಬೇಳಬೇಕಾದರೂ ಪತ್ರಿಕೆಗಳ ಮೇಲೆ ಬೇಸ್ ಮಾಡಿ ಹೇಳಬೇಕು. We have no administrative machinary.

Sri D. DEVARAJ URS.—You may depend on that, and also depend on our statement.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಗುಂಪು ಕಟ್ಟಿ, ವಿದಿ ನಿಯಮಗಳಿಗೆ ವಿರುದ್ಧವಾಗಿ ನಡೆಯುತಕ್ಕಂಥ ಚಳುವಳಿಯಾಗಲೀ ಅಥವಾ ಅತ್ಯಾಚಾರಗಳಾಗಲೀ, ಅಪರಾಧಗಳನ್ನು ಮಾನ್ಯ ಮಾಡಬೇಕು ಎಂದು ಈ ಸಭೆ ಹೇಳುತ್ತದೆಯೇ ? ಸಾಧ್ಯವಿಲ್ಲ.

ಶಾಸನಗಳನ್ನು ಮಾಡಿರುವವರು ನಾವೂ ನೀವೆ. ಅದಕ್ಕೆ ತದ್ವಿರುದ್ಧವಾಗಿ ನಡೆದರೆ ನಾವೂ ನೀವೂ ಅದನ್ನು ಎದುರಿಸಬೇಕಾಗುತ್ತದೆ. ಶಾಸನದಂತೆ ನಡೆಯುವವರು ಯಾರೇ ಆಗಿರಲಿ ಅವರು ಮಾಡಿರುವುದು ನ್ಯಾಯವೆಂದು ಎಲ್ಲರೂ ಒಪ್ಪಬೇಕು. ಅವನ್ನು ಬಿಟ್ಟು ಶಾಸನಕ್ಕೆ ವಿರುದ್ಧವಾಗಿ ನಡೆದು ಜನರಿಗೆ ತೊಂದರೆ ಕೊಡುವುದಾದರೆ ಅದರ ಬಗ್ಗೆ ಅವಶ್ಯವಾದ ಕಾಯಿದೆಕ್ರಮ ತೆಗೆದುಕೊಳ್ಳುವುದಕ್ಕೇ ಪೋಲೀಸ್ ಆಕ್ಟ್ ಮಾಡಿರುವುದು. ಅವರಂತೆ ಕ್ರಮ ತೆಗೆದುಕೊಂಡಾಗ ಹಾಗೆ

ಮಾಡಿದ್ದು ತಪ್ಪು ಎಂದು ಹೇಳಿದರೆ ಹೇಗೆ! ನಿಮಗೆ ತೊಂದರೆಯಾದಾಗ ಪೋಲೀಸ್ ರಕ್ಷಣೆಬೇಕೆಂದು ನೀವು ಮೊದಲು ಕೇಳುತ್ತೀರಿ. ಎಲ್ಲ ಸೂಕ್ತಪೋ ಅಲ್ಲಿ ಕ್ರಮ ಕೈಕೊಂಡಾಗ ಪೋಲೀಸರು ಮಾಡುವುದೆಲ್ಲಾ ದೌರ್ಜನ್ಯ ಎಂದು ಹೇಳುವುದಾದರೆ ಹೇಗೆ? ಎಲ್ಲಾದರೂ ಅಕ್ರಮ ನಡೆದಿದ್ದರೆ ಸರಕಾರ ವಿಚಾರಣೆ ನಡೆಸಿ ಕ್ರಮ ಕೈಕೊಳ್ಳಬಹುದು. ಸಮಾಜವಾದಕ್ಕೂ ಪೋಲೀಸರಿಗೂ ಸಂಬಂಧವಿದೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸಮಾಜವಾದಕ್ಕೂ ಮತ್ತು ಪೋಲೀಸರಿಗೂ ಪರಸ್ಪರ ಸಂಬಂಧ ಕಲ್ಪಿಸಬಾರದು. ಅದು ಮೂಭೂತವಾದ ತತ್ವಕ್ಕೆ ವಿರೋಧವಾದುದು. ಇದು ನನ್ನ ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಅದು ಕ್ರಯಾಲೋಪವಾಗುವುದಿಲ್ಲ, ತಾವು ಕುಳಿತುಕೊಳ್ಳಿ.

ಶ್ರೀ ಎಚ್ ಎಂ. ಚನ್ನಬಸಪ್ಪ.—ನಾವೂ ನೀವೂ ಸೇರಿ ಪೋಲೀಸ್ ಕಾನೂನು ಮಾಡಿ ಒಂದು ತೀರ್ಮಾನ ಮಾಡಿದ್ದೇವೆ. ಸಮಾಜವಾದ ಹೇಗೆ ಮುಂದುವರೆಯಬೇಕು ಎಂಬುದು ತಮಗೆ ಗೊತ್ತಿದೆ. ಏನೋ ಮನಸ್ಸಿನಲ್ಲಟ್ಟುಕೊಂಡು ನುಮ್ಮನೆ ಮಾತನಾಡುವುದು ಸರಿಯಲ್ಲ ಎಂದು ನಾನು ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ. ಈ ವಿಷಯದಲ್ಲಿ ಸರಕಾರ ಸೂಕ್ತ ಕ್ರಮ ಕೈಕೊಳ್ಳುತ್ತದೆ. ಇಷ್ಟು ವಿಷಯ ತಮಗೆ ತಿಳಿಸುತ್ತೇನೆ.

Shri D. DEVARAJ URS.—On 21st November 1972 students of Kittel College, Dharwar abstained from classes protesting against the proposed rise in tuition fees.

On 23rd November 1972 students of Kittel and J.S.S. Colleges, Dharwar, took out a procession and held a meeting. They abstained from classes on 27th November 1972 and observed "Dharwar Bundh". On 27th November 1972 they went in a procession to Karnatak University Campus and dispersed peacefully.

On 27th November 1972 students of Hubli private Colleges (Kadasiddeshwara and Jabin Science Colleges) took out a procession and held a meeting on the same issue. There were instances of stone throwing at the Industrial Training Institute, Ashoka Hotel, Chandrakala Theatre and Sudharshan Theatre, causing minor damages. The Police prevented untoward incident and took up four cases. The total damage is worth Rs. 100.

On 28th November 1972 the students took out a procession at Hubli. They blocked traffic and National Highway by squatting on the road and placing obstructions. They also pelted stones. They set fire to the tar drums. The Police dispersed the students peacefully. Four policemen and one student received minor injuries in stone throwing incidents. Two cases were registered by the Police.

On 29th November 1972 students blocked the National Highway by putting road blocks. The Deputy Commissioner and the Superintendent of Police advised them to remove the road blocks. Then they started pelting stones at the Police and also setting fire to wooden logs used as road blocks. They were dispersed by mild lathi charges. 2 S.Is, 5 P.Cs. and 2 students sustained injuries in the incidents. A Police van was also damaged. One case of rioting was registered. Intensive Police patrolling was arranged.

(SRI D. DEVARAJ URS)

As the students' agitation is likely to continue and take a violent turn, the District Magistrate, Dharwar, passed prohibitory orders under Section 35 of the Mysore Police Act to be in force in Hubli City from 7-00 A.M. on 30th November 1972 to 10-00 P.M. on 6th December 1972, both days inclusive.

On 30th November 1972 two groups of students violated the Prohibitory Orders. Hence, 20 students have been arrested for violating the prohibitory Orders.

The situation is peaceful in Hubli-Dharwar area.

ಇದರಲ್ಲಿ ಎಕ್ಸೆಸಸ್ ಆಗಿದೆ, ಮತೊಂದಾಗಿದೆ ಎಂಬುದನ್ನು ವರದಿಯಮೇಲೆ ಹೇಳುತ್ತೇನೆ ಎಂದು ಹೇಳುವುದಾದರೆ ಯಾವ ವರದಿ ? ಶ್ರೀಮಾನ್ ದೇವೇಗೌಡರು ಹೇಳಿದಹಾಗೆ ಪತ್ರಿಕೆಯಲ್ಲಿ ಬಂದಿರುವುದನ್ನು ನಂಬಬಾರದು ಎಂದು ನಾನು ಹೇಳುವುದಿಲ್ಲ. ಅವರೂ ಕೂಡ ಪತ್ರಿಕೆ ವಿಚಾರ ಹೇಳುತ್ತಿದ್ದರು. ನಾನು ಹೇಳುವದಕ್ಕೂ ಪತ್ರಿಕಾ ವರದಿಗೂ ದೊಡ್ಡ ವೆತ್ಯಾಸ ಕಾಣುವುದಿಲ್ಲ. ಸರಕಾರದ ವರದಿ ಪ್ರಕಾರ ನಾನು ಹೇಳುವುದು. ನಾನು ಪತ್ರಿಕೆಯನ್ನು ಸಹ ನೋಡಿದ್ದೇನೆ. I have nothing to say against the paper reports that have appeared in the Press.

ಶ್ರೀ ಎಸ್. ಬಂಗಾರಪ್ಪ.—ಪತ್ರಿಕಾ ವರದಿ ಬರುತ್ತದೆ, ಎಲ್ಲಿಂದಲೋ ವರದಿ ಬರುತ್ತದೆ, ಅದನ್ನು ಒಂದೇ ನಲ ನಂಬುವುದಕ್ಕಾಗುವುದಿಲ್ಲ ಎಂದು ಶ್ರೀ ಚನ್ನಬಸಪ್ಪನವರು ಹೇಳಿದರು.

ಅಧ್ಯಕ್ಷರು.—ಇಲ್ಲ, ಇಲ್ಲದಿರುವುದನ್ನೆರ್ಾ ಹೇಳುವ ಅಭ್ಯಾಸ ಮಾಡಬಾರದು.

ಶ್ರೀ ಎಸ್. ಬಂಗಾರಪ್ಪ.—ಅದೇ ಅಭಿಪ್ರಾಯದಲ್ಲಿ ಹೇಳಿದ್ದಾರೆ.

ಅಧ್ಯಕ್ಷರು.—ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಉತ್ಪ್ರೇಕ್ಷೆ ಮಾಡಿ ವರದಿಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ನಮ್ಮ ವರದಿಗೂ ಮತ್ತು ಪತ್ರಿಕಾವರದಿಗೂ ಅಂಥ ವತ್ಯಾಸವಿಲ್ಲ. ಪೋಲೀಸಿನವರು ಮನಸ್ಸಿಗೆ ಬಂದ ಹಾಗೆ ಮಾಡುತ್ತಾರೆ ಎಂದು ಹೇಳುವರು. ಪೋಲೀಸಿನವರು ಜವಾಬ್ದಾರಿಯನ್ನು ನಿರ್ವಹಿಸದೆ ಕೈಕಟ್ಟಿ ಕೊಂಡು ಕುಳಿತುಕೊಳ್ಳಬೇಕೇನು ? ಶಾಂತಿಯುತವಾಗಿ ಪ್ರದರ್ಶನವಗ್ಯೆರೆ ಮಾಡಿದರೆ ಅವರಿಗೆ ಹೊಡೆಯುವುದಕ್ಕೆ ಅಧಿಕಾರವಿಲ್ಲ. ಶಾಂತಿಯುತವಾಗಿ ನಡೆದುಕೊಳ್ಳದಿದ್ದರೆ ಏನು ಮಾಡಬೇಕು? Whoever that man is, if he deserves to be punished, we must take action against him. ಶಾಂತಿಯುತವಾಗಿ ನಡೆದುಕೊಳ್ಳದೆ ದಾರಿಯಲ್ಲಿ ಹೋಗುವವರಿಗೇಕೆ ಅಡ್ಡಿ ಮಾಡಬೇಕು ?

ಶ್ರೀ ಎಸ್. ಬಂಗಾರಪ್ಪ.—ಪೋಲೀಸಿನವರು ಮನೆಗಳಿಗೆ ನುಗ್ಗಿದ್ದಾರೆ. ಅದು ಸರಿಯೇ ? (ಗಲಾಟೆ).

Sri D. DEVARAJ URS.—If a man has committed an offence the Police Officer has to go in search of him. If he is a culprit, he has to be booked according to law.

Sri V. N. PATIL.—Provided he is a culprit.

Sri D. DEVARAJ URS.—Whover is responsible for maintenance of law and order, he has to take action against the culprit. If a Police Officer has acted violating the Criminal Procedure Code, here is the law, here is the Government which will take action

against the officer. As long as the Police acts within the four corners of the rules and regulations, nothing can be said against them; nor can we prevent them from acting.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿರುವಂತೆ.— Provided, if he is a culprit. ಆಗ ಪೋಲೀಸಿನವರು ಒಳಗೆ ಹೊಕ್ಕು ಒಡೆಯುವುದಕ್ಕೂ ಅವಕಾಶವಾಗುತ್ತದೆ. ಆದರೆ.....

ಶ್ರೀ ಡಿ. ದೇವರಾಜ ಅರಸ್.—ರಸ್ತೆಯಲ್ಲಿ ಇರತಕ್ಕ ಟಾರ್ ಡ್ರಂ, ಮರದ ತುಂಡುಗಳು ಇತ್ಯಾದಿಗಳಿಗೆಲ್ಲಾ ಬೆಂಕಿ ಹಚ್ಚಿ ಓಡಿ ಹೋಗುತ್ತಿದ್ದರೆ ಅಂಥವರನ್ನು ಅವರು ಎಲ್ಲೇ ಇರಲಿ ಅಟ್ಟಿಸಿಕೊಂಡು ಹೋಗಲೇ ಬೇಕಾಗುತ್ತದೆ.

Sri V. N. PATIL.—Was it necessary for the Police to enter into the premises and beat the students who were innocent?

Sri D. DEVARAJ URS.—The Government has to act according to the rules. The law has to be enforced upon the people who disobey the law. If we had not taken action in time the situation would have gone worse and out of control.

Sri V. N. PATIL.—What I am asking is whether it is correct on the part of the Police to beat the students' head.

Sri C. M. ARUMUGAM.—You cannot sit in judgement unless you definitely know that the students have disobeyed the law.

Sri D. DEVARAJ URS.—There is some point if the students make peaceful demonstration. Supposing they go out of control, certain amount of force has to be used. They had resorted to blocking the Highways, entering into the hotels, destroying the shops, etc. In those circumstances you please tell me what the Government is expected to do. You may ask the Government that the Police may be instructed to ask the demonstrators to disperse. That has been done. The Police have done their duty. There is nothing wrong on their part.

ಶ್ರೀ ಪಾಟಾಳ್ ನಾಗರಾಜ್.—ನೀವು ಆ ಹುಡುಗರನ್ನು ಕರೆಸಿ ಬುದ್ಧಿವಾದವನ್ನು ಕೇಳುವುದಕ್ಕಾಗುವುದಿಲ್ಲವೇ ?

Sri D. DEVARAJ URS.—The Hon'ble Member is asking for something else. ನಮ್ಮ ಲಿಂಗಪ್ಪನವರು ಕೇಳುವಂತೆ ಆ ಹುಡುಗರು ಅಹಿಂಸಾಮಾರ್ಗದಲ್ಲಿ ಸತ್ಯಾಗ್ರಹ ಮಾಡುವುದಕ್ಕೆ ನಮ್ಮ ಅಡ್ಡಿಯೇನೂ ಇರುವುದಿಲ್ಲ. ಅವರು ಹಾಗೆ ಅಹಿಂಸಾಮಾರ್ಗದಲ್ಲಿ ತಮ್ಮ ಗ್ರಿವೆನ್ಸನ್ಸ್‌ನ್ನು ಪರಿಹರಿಸಿಕೊಳ್ಳುವುದಕ್ಕೆ ನಮ್ಮ ಅಡ್ಡಿ ಇಲ್ಲ. ಅದನ್ನು ಅಡ್ಡಿ ಪಡಿಸಿದರೆ ನಮ್ಮ ಸರ್ಕಾರವನ್ನು ನಾಗರೀಕ ಸರ್ಕಾರವೆಂದು ಹೇಳುವುದಕ್ಕೆ ಅವಕಾಶ.... ವಿರುವುದಿಲ್ಲ. ಅಹಿಂಸಾ ಮಾರ್ಗವನ್ನು ಕೈ ಬಿಟ್ಟು ಹೈವೇಗಳಲ್ಲಿ ಅಕ್ಷನಬರ್ ಕೆಲಸಗಳನ್ನು ಮಾಡುವುದಕ್ಕೆ ಇವರಿಗೆ ಅಧಿಕಾರವಿಲ್ಲ. ಅಂಗಡಿಗಳಿಗೆ ಕಲ್ಲು ಹೊಡೆಯುವುದಕ್ಕೆ ಇವರಿಗೆ ಅಧಿಕಾರವಿಲ್ಲ. ಟಾರ್ ಡ್ರಂಗಳನ್ನು ತಂದು ಅವುಗಳಿಗೆ ಬೆಂಕಿ ಹಚ್ಚುವುದಕ್ಕೆ ಅವರಿಗೆ ಅಧಿಕಾರವಿಲ್ಲ....

ಶ್ರೀ ಪಾಟಾಳ್ ನಾಗರಾಜ್.—ಅದಕ್ಕೆಲ್ಲಾ ಪೋಲೀಸಿನವರೇ ಕಾರಣರು.....

ಶ್ರೀ ಡಿ. ದೇವರಾಜ ಅರಸ್.—ತಾವು ಹಾಗೆ ಹೇಳಿದರೆ ನಾನು ಹೇಳುತ್ತೇನೆ, ಅದಕ್ಕೆಲ್ಲಾ ನೀವೂ ಕಾರಣರೇ ಎಂದು....

ಶ್ರೀ ವಿ. ಎನ್. ಪಾಟೀಲ್.—ತಾವು 'ನೀವೂ ಕಾರಣರು' ಎಂದು ಯಾವ ಅಧಾರದ ಮೇಲೆ ಹೇಳುತ್ತೀರಿ? ತಾವು ಆ ಪದವನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಕೇಳುತ್ತೇನೆ There may be some agents who are doing all these mischiefs. Those people should be dealt with.

Sri D. DEVARAJ URS.—There is nothing to take back. The agents will have to be dealt with. You will all agree that goondaism should not be allowed to continue. Fee raise is a different question. ಫೀಸ್ ರೈಜ್ ಮಾಡಿರತಕ್ಕ ವಿಚಾರವನ್ನು ನಾವೀಗ ಇಲ್ಲಿ ಚರ್ಚೆ ಮಾಡುತ್ತಿಲ್ಲ....

ಶ್ರೀ ಎಸ್. ಬಂಗಾರಪ್ಪ.—'ನೀವೇ ಕಾರಣರು' ಎಂದು ಹೇಗೆ ಹೇಳಿದಿರಿ ಹಾಗೆ ಮುಖ್ಯ ಮಂತ್ರಿಗಳು ಹೇಳುವುದಾದರೆ ಇಲ್ಲಿ ಸದನದಲ್ಲಿ ಯಾವ ವಿಷಯದ ಮೇಲೂ ಸದಸ್ಯರು ಮಾತನಾಡುವುದಕ್ಕೆ ಅವಕಾಶವೇ ಇರುವುದಿಲ್ಲ. ಆದುದರಿಂದ ದಯವಿಟ್ಟು ಮುಖ್ಯ ಮಂತ್ರಿಗಳು ಅವರು ಹೇಳಿದ ಪದವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲವೇ ಮಾನ್ಯ ಅಧ್ಯಕ್ಷರು ಅದನ್ನು ವರದಿಯಿಂದ ಎಕ್ಸ್‌ಪಂಜ್ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಾನೀಗ ಈ ಸಭೆಯ ಮೂಲಕ ಆ ವಿದ್ಯಾರ್ಥಿಗಳಿಗೆ ಪ್ರಾರ್ಥಿಸಿ ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರದವರು ಅವರ ತೊಂದರೆಗಳೇನು ಎಂಬುದನ್ನು ಕೇಳುವುದಕ್ಕೆ ಸಿದ್ಧವಾಗಿದ್ದಾರೆ. ಆದಕ್ಕೆ ಅವರು ಅವರ ತೊಂದರೆಗಳನ್ನು ಅಹಿಂಸಾಮಾರ್ಗದಲ್ಲಿ ಪರಿಹಾರ ಮಾಡಿಕೊಳ್ಳುವುದಕ್ಕೆ ಸಾಕಷ್ಟು ಅವಕಾಶವಿದೆ, ಆದರೆ ಅವರು ಅದನ್ನು ಬಿಟ್ಟು ಪಬ್ಲಿಕ್ ಮತ್ತು ಪ್ರೈವೇಟ್ ಪ್ರಾಪರ್ಟಿಗಳಿಗೆ ಡ್ಯಾಮೇಜ್ ಮಾಡುವುದು ಪೋಲೀಸರ ಕಣ್ಣು ಎದುರಿಗೆ ನಡೆಯುತ್ತಿದ್ದರೆ ಅವರು ಸುಮ್ಮನೆ ಕೈಕಟ್ಟಿ ಕುಳಿತಿರಬೇಕೇ? ಅವರು ರಾಜ್ಯದ ಪ್ರಜೆಗಳಿಗೆ ಕಾನೂನು ಪ್ರಕಾರ ಎನು ಪ್ರೊಟೆಕ್ಷನ್ ಕೊಡಬೇಕೋ ಅದನ್ನು ಪೋಲೀಸಿನವರು ಕೊಡಬೇಡವೇ? ಹಾಗೆ ಕೊಡದಿದ್ದರೆ ಆಗಲೂ ತಾವು ಅದರ ಬಗ್ಗೆಯೂ ಟೀಕೆಗಳನ್ನು ಮಾಡೇ ಮಾಡುತ್ತೀರಿ. ಉದಾಹರಣೆಗೆ ಭೂಮಾಲೀಕರು ಗೇಣಿದಾರರಿಗೆ ಕಿರುಕುಳ ಕೊಡುತ್ತಿರುವುದರ ಬಗ್ಗೆ ಪೋಲೀಸಿನವರು ಅವರಿಗೆ ಏನೂ ಪ್ರೊಟೆಕ್ಷನ್ ಕೊಡುತ್ತಿಲ್ಲ ಎಂದು ಇದೇ ಸಭೆಯಲ್ಲಿ ಟೀಕೆ ಮಾಡಿಲ್ಲವೇ? ಒಂದುವೇಳೆ ವಿದ್ಯಾರ್ಥಿಗಳು ಏನೂ ತಪ್ಪನ್ನು ಮಾಡದಿದ್ದ ಸಂದರ್ಭದಲ್ಲಿ ಪೋಲೀಸಿನವರು ಅಕ್ರಮವಾಗಿ ವರ್ತಿಸಿರತಕ್ಕ ಸಂದರ್ಭಗಳಿದ್ದರೆ ಅದನ್ನು ಸರ್ಕಾರದವರ ಗಮನಕ್ಕೆ ತನ್ನಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ. ಅದನ್ನು ಬಿಟ್ಟು ಅವರು ಸ್ಟೂಡೆಂಟ್ ಅಜಿಜೇಸನ್ ಎಂಬ ಸೆಸರಿನಲ್ಲಿ ಅಂಗಡಿ, ಮನೆಗಳಿಗೆ ಬೆಂಕಿ ಹಚ್ಚುತ್ತಿದ್ದರೆ ಹಣ್ಣಿನ ಅಂಗಡಿಗಳಿಗೆ ನುಗ್ಗಿ ಹಣ್ಣನ್ನು ತಿಂದು ಹಾಕುತ್ತಿದ್ದರೆ, ಹೋಟಲುಗಳಿಗೆ ನುಗ್ಗಿ ದಾಂಧಲೆ ಮಾಡುತ್ತಿದ್ದರೆ, ಟಾರ್ ಡ್ರಮ್‌ಗಳಿಗೆ ಬೆಂಕಿ ಹಚ್ಚುತ್ತಿದ್ದರೆ ಅದನ್ನು ನೋಡಿಕೊಂಡು ಸರ್ಕಾರ ಸುಮ್ಮನಿರಬೇಕೆ? ಹಾಗೆ ಸುಮ್ಮನಿದ್ದರೆ ಅದು ಸರಿಯೇ?

ಶ್ರೀ ಪಾಟಾಳ್ ನಾಗರಾಜ್.—ಸ್ಟೂಡೆಂಟುಗಳ ಹೆಸರಿನಲ್ಲಿ ಬೇರೆಯವರು ಹಾಗೆ ಮಾಡಿದ್ದರೆ?

ಶ್ರೀ ಡಿ. ದೇವರಾಜ ಅರಸ್.—ಅಂಥವರು ಯಾರು ಎಂಬುದನ್ನು ತಾವು ತಿಳಿಸಿ ಎಂದು ನಾನು ಕೇಳುತ್ತಿದ್ದೇನೆ.

Sri V. N. PATIL.—Kindly intervene in this matter and see the fee raise controversy is settled.

Sri D. DEVARAJ URS.—The fee raise controversy is different. I have no objection for their peaceful demonstration. Let them do it. I hope the Hon'ble Members of the opposition will co-operate with the Government in maintining law and order. ನಾನು ಸಧ್ಯದ ಸಂದರ್ಭದಲ್ಲಿ ಫೀಜನ್ನು ರೈಸ್ ಮಾಡಿರತಕ್ಕ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದು ಸಕಾಲವಲ್ಲ. ಈಗ ಅದರ ಬಗ್ಗೆ ನಾನೇನಾದರೂ ಹೇಳಿದರೆ ನಾಳೆ 'ನೀವು ಹೇಳಿದಿರಿ ಮಾಡಲಿಲ್ಲ' ಎಂದು ಅದಕ್ಕೆ ಮತ್ತೆ ಟೀಕೆಗಳು ಬರಬಹುದು. ಹಿಂದೆ ಆ ವಿಚಾರ ಸಭೆಯಲ್ಲಿ

ಬಂದಿತ್ತು. ಆಗ್ಗೆ ಸರ್ಕಾರ ಅದರ ಬಗ್ಗೆ ಒಂದು ತೀರ್ಮಾನ ಕೊಟ್ಟಿದೆ. ಈಗ ಮುಕ್ತ ಅದರ ವಿಚಾರದಲ್ಲಿ ಎಲ್ಲವನ್ನೂ ಸರಿಯಾಗಿ ಪರಿಷ್ಕಾರ ಮಾಡಿಕೊಳ್ಳದೆ ಏನು ಹೇಳುವುದಕ್ಕೂ ಸಾಧ್ಯವಿಲ್ಲ. ಅದರ ವಿಚಾರವನ್ನು ಸಾಂಗವಾಗಿ ಸ್ಟಡಿ ಮಾಡಿ ನಂತರ ನಭೆಗೆ ನನ್ನ ಉತ್ತರವನ್ನು ಹೇಳ ಬೇಕಾಗುತ್ತದೆ.

3.00 P.M.

ಅಧ್ಯಕ್ಷರು.—ಸರ್ಕಾರದವರು ಕೊಟ್ಟಿರತಕ್ಕ ಉತ್ತರದಿಂದ ತಾವಿಬ್ಬರೂ ಕಳುಹಿಸಿರುವ ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಅನುಮತಿಯನ್ನು ಕೊಡುವುದಕ್ಕಾಗುವುದಿಲ್ಲ.

Sri B. B. SAYANAK.—Madam Speaker, the Hon'ble Chief Minister said the Police have every right to enter the houses. This is highly objectionable. Even the Britishers did not do so and this Government is doing it.

Sri D. DEVARAJ URS.—How do you say it is not correct? It is your opinion. The Law is one and the same whoever it may be.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದ ಹೇಳಿಕೆಯಿಂದ ನಾವು ತೃಪ್ತರಾಗಿದ್ದೇವೆಂದು ನೀವು ಹೇಳಿದ್ದೀರೆಂದು ಕಾಣುತ್ತದೆ. ಅದು ಸರಿಯಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇಂತಹ ಪ್ರಸಂಗಗಳು ಅಲ್ಲಿ ನಡೆದಿರುವುದಕ್ಕೆ ನಾವು ಕಾರಣರಲ್ಲದಿದ್ದರೂ ನೀವೇ ಕಾರಣರು ಎಂದು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನಾವು ನಿಮ್ಮನ್ನು ಕಾರಣರೆಂದು ಹೇಳುವುದಕ್ಕಾಗುತ್ತದೆಯೇ? ವಿದ್ಯಾರ್ಥಿಗಳ ಹೆಸರಿನಲ್ಲಿ ಕೆಲವು ಜನರು ಇಂತಹ ಪ್ರಸಂಗಗಳಲ್ಲಿ ಕೈಹಾಕುವುದು ಉಂಟೆಂದು ನಾನು ಹೇಳಿದ್ದು.

ಶ್ರೀ ಎಸ್. ಪೈ. ಪಾಟೀರ್ (ಸಿಂದ್ಗಿ) ಉತ್ತರ ಭಾಗದ ಬಿಜಾಪುರ ಜಿಲ್ಲೆಯೊಳಗೆ ವಿದ್ಯಾರ್ಥಿಗಳ ಫೀಸ್, ಮಾಸಿಕ ವರಮಾನ 500 ರೂಪಾಯಿಗಳವರೆಗೆ ಇರತಕ್ಕವರೆಲ್ಲರಿಗೂ ಮಾಫಿ ಮಾಡ ಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಇವತ್ತು ಹೈದರಾಬಾದ್ ಕರ್ನಾಟಕದ ಕೆಲವು ಭಾಗಗಳಲ್ಲಿ ಆ ರೀತಿ ಮಾಡಬೇಕು ಎಂದು ಹೇಳಿದೆ.

I did say so. madam, if I remember it alright. I think the Leader of the Opposition also will bear with me. ಡಿಸ್ಟ್ರೆಸ್ ಕಂಡೀಷನ್ ಇರುವ ಭಾಗ, ಅದು ಎಲ್ಲಿದ್ದರೂ ಅಲ್ಲಿಗೆ ಎಲ್ಲ ತರಹ ಸಹಾಯ ಮಾಡೋಣವೆಂದು ಹೇಳಿದೆ. ಆ ರೀತಿಯಾಗಿ ಫೀಸ್ ವಿಷಯದಲ್ಲಿ ಪರಿಶೀಲಿಸೋಣ. ಬಿಜಾಪುರ ಉತ್ತರ ಭಾಗ ಮತ್ತು ಇತರ ಭಾಗಗಳ ವಿಷಯವನ್ನೂ ಕೂಡ ನಾವು ವಿಚಾರ ಮಾಡೋಣ. It includes all such areas.

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ಕೇಂದ್ರಸರ್ಕಾರದ ಒಬ್ಬ ಅಧಿಕಾರಿ ವೇಷ ಹಾಕಿ ಕೊಂಡು ಇಲ್ಲಿಗೆ ಬಂದಾಗ್ಗೆ ಸರ್ಕಾರದ ಒಬ್ಬ ಕಾರ್ಯದರ್ಶಿಯವರು ಹೇಳಿದ ಕೂಡಲೇ ಕಾರ್ಪೊರೇಷನ್ ಕಮಿಷನರ್, ಹೆಲ್ತ್ ಆಫೀಸರ್, ಇವರು ಯಾರೋ ಅಧಿಕಾರಿ ಒಬ್ಬರು ಬಂದುಬಿಟ್ಟಿದ್ದಾರೆಂದು ಫೋಳಿಕೊಂಡು ಅವರನ್ನು ನೋಡುವುದಕ್ಕೆ ಹೋಗಿದ್ದಾರೆ. ಇದರಿಂದ ನಮ್ಮ ಸರ್ಕಾರದಲ್ಲಿ ಏನಾದರೂ ಜವಾಬ್ದಾರಿಯುತವಾದ ಅಧಿಕಾರಿಗಳು ಇದ್ದಾರೆಯೋ ಇಲ್ಲವೋ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಕೇಂದ್ರಸರ್ಕಾರದಿಂದ ಬಂದವರು ಯಾರು? ಅವರು ಬಂದಿರುವ ಬಗ್ಗೆ ಏನಾದರೂ ಮಾಹಿತಿ ಇದೆಯೇ? ಏಕೆ ಬಂದರು? ಅವರನ್ನು ನೋಡುವುದಕ್ಕಾಗಿ ಕಾರ್ಪೊರೇಷನ್ ಕಮಿಷನರ್ ಮತ್ತು ಹೆಲ್ತ್ ಆಫೀಸರ್ ಹೋಗಿರುವುದರಿಂದ, ನಿಜವಾಗಿ ಇಂತಹ ಅಧಿಕಾರಿಗಳ ಮೇಲೆ ಸರ್ಕಾರದ ಕಂಟ್ರೋಲ್ ಏನಾದರೂ ಇದೆಯೇ ಎಂಬುದಾಗಿ ನಾನು ಕೇಳಬೇಕಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—ಆ ವಿಚಾರವನ್ನೆಲ್ಲಾ ನಾನು ತಪಾಸ್ ಮಾಡಿಸುತ್ತೇನೆ.

Regarding Hunger Strike by weavers in Jamakhandi Etc.

†ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ಸಭೆಯಲ್ಲಿ ರಾಜ್ಯದ ನೇಕಾರರ ಪರಿಸ್ಥಿತಿ ಬಗ್ಗೆ ಏನೊಂದು ಉಪವಾನ, ಮುಷ್ಕರ ನಡೆಯುತ್ತಿದೆಯೋ ಅದರ ಬಗ್ಗೆ ಪ್ರಸ್ತಾಪ ಮಾಡಿದಾಗ ಕೈಗಾರಿಕೆಯ ಮಂತ್ರಿಗಳಾದ ಮಾನ್ಯ ಶ್ರೀ ಕೃಷ್ಣ ಅವರು 22ನೇ ತಾರೀಖಿನಲ್ಲಿ ಒಂದು ಹುಕುಂ ಹೊರಡಿಸಲಾಗಿದೆಯೆಂದು ಹೇಳಿದರು. ಈಗಾಗಲೇ 10ನೇ ದಿವಸ ಅವರ ಮುಷ್ಕರ ಪ್ರಾರಂಭ ವಾಗಿದೆ. ಅವರ ಉಪವಾನ, ಮುಷ್ಕರ ನೋಡಿದರೆ ಪರಿಸ್ಥಿತಿ ಭೀಕರವಾಗಿದೆ ಸರ್ಕಾರದವರು ಹುನ್ಕೂರ್ ಮತ್ತು ಬನಹಟ್ಟಿ ಸ್ಥಳಗಳಲ್ಲಿ ಎರಡು ಚೆಕ್ಪಟ್ಟೆಗಳ್ ಡಿಪೋಗಳನ್ನು ತೆರೆದು ಅವರ ಬೇಡಿಕೆ ಗಳನ್ನು ಈಡೇರಿಸುವುದಕ್ಕಾಗಿ ಪ್ರಯತ್ನಮಾಡುತ್ತೇವೆಂದು ಹೇಳಿದ್ದಾರೆ. 10 ಲಕ್ಷ ರೂಪಾಯಿ ಗಳನ್ನು ಡಿಪಾಜಿಟ್ ಮಾಡಬೇಕೆಂದು ನಿರ್ಣಯ ಮಾಡಿದ್ದಾರೆ.. ಅದರ ಬಗ್ಗೆ ರೆಕರಿಂಗ್ ಎಕ್ಸ್ ಪೆಂಡಿಚರ್ ಏಾಟ್ ಮಾಡುವ ಒಂದು ವ್ಯವಸ್ಥೆ ಮಾಡಿದ್ದರೂ ಈಗಿರತಕ್ಕ ಆರ್ಡರನ್ನು ಇಂಪ್ಲಿಮೆಂಟ್ ಮಾಡುವುದು ಯಾವಾಗ? ಅವರೇನೋ ಮುಷ್ಕರವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಜಮಖಂಡಿ, ಬಾಗಲಕೋಟೆಗಳಲ್ಲಿ ಇಂತಹ ಮುಷ್ಕರಗಳು ನಡೆಯುತ್ತಿವೆ. ರಾಜ್ಯದ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ನೇಕಾರರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ನಾನು ಆ ಕಡೆಗಳಲ್ಲಿ ಪ್ರವಾಸವಮಾಡಿದಾಗ ನನಗೆ ಹಲವು ಮನವಿಗಳನ್ನು ಕೊಟ್ಟಿದ್ದಾರೆ. ಸರ್ಕಾರ ದವರು ತೆಗೆಯುತಕ್ಕ ಡಿಪೋಗಳಿಂದ ಹೆಚ್ಚಿನ ಅನುಕೂಲವಾಗುವಂತೆ ಇರಬೇಕು. ಇಲ್ಲದಿದ್ದರೆ ಡಿಪೋಗಳನ್ನು ತೆರೆದರೂ ಬರಗಾಲ ಪರಿಸ್ಥಿತಿ ಇರುವಂತಹ ಭಾಗಗಳಲ್ಲಿ ಎನೂ ಪ್ರಯೋಜನವಾಗು ವುದಿಲ್ಲ. ಆದ್ದರಿಂದ ಸರ್ಕಾರದವರು ಅತಿ ಶೀಘ್ರವಾಗಿ ಅಂತಹ ಸ್ಥಳಗಳಲ್ಲಿ ಡಿಪೋಗಳನ್ನು ಕೂಡಲೇ ತೆರೆಯುವ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಧಿಕಾರಿಗಳನ್ನು ಅದೆ ಕ್ಕೋಸ್ಕರ ಡೆಪ್ಯೂಟ್ ಮಾಡಿ ಅಲ್ಲಿಲ್ಲಿ ಏನೇನು ವ್ಯವಸ್ಥೆಮಾಡಬೇಕೋ ಅವನ್ನು ಕಾರ್ಯರೂಪಕ್ಕೆ ತರು ವಂತೆ ಮಾಡಬೇಕು. ಇನ್ನು ಅವರಿಗೆ ಕೊಡತಕ್ಕ ಹಣ ಏನಿದೆಯೋ ಅದನ್ನು ನಗದು ರೂಪದಲ್ಲಿ ಅವರಿಗೆ ಮುಟ್ಟುವಂತೆ ಏರ್ಪಾಡುಮಾಡಬೇಕು. ಒಬ್ಬೊಬ್ಬ ನೇಕಾರನು ಒಂದೊಂದು ಸಾವಿರ ರೂಪಾಯಿಗಳಷ್ಟಾದರೂ ಪಡೆಯುವ ಹಾಗೆ ವ್ಯವಸ್ಥೆಮಾಡಬೇಕೆಂದು ಬೇಡಿಕೆಯನ್ನು ಕೊಟ್ಟಿ ದ್ದಾರೆ. ಕನಿಷ್ಠಪಕ್ಷ ಒಬ್ಬ ನೇಯ್ಗೆಯವನಿಗೆ ಒಂದು ಸಾವಿರ ರೂಪಾಯಿಗಳನ್ನು ಸಾಲದ ರೂಪ ವಾಗಿ ಕೊಡಬೇಕೆಂದೂ, ಯಾರನ್ ಕೊಳ್ಳುವುದಕ್ಕೆ ಅನುಕೂಲವಾದ ರೀತಿಯಲ್ಲಿ ವ್ಯವಸ್ಥೆಮಾಡ ಬೇಕೆಂದೂ ಅವರ ಬೇಡಿಕೆಯಲ್ಲಿ ನೂಚಿಸಿದ್ದಾರೆ. ಆದ್ದರಿಂದ ಅದರ ಬಗ್ಗೆ ಸರ್ಕಾರದ ಹುಕುಂನಲ್ಲಿ ಯಾವುದೇ ರೀತಿಯಲ್ಲಿ ಏನು ಅಭಿಪ್ರಾಯವನ್ನೂ ಸೂಚಿಸಿಲ್ಲ. ಆದಕಾರಣ ಸರ್ಕಾರದವರು ಇದರ ಬಗ್ಗೆ ತಮ್ಮ ನಿರ್ದಿಷ್ಟವಾದ ಅಭಿಪ್ರಾಯವನ್ನು ತಿಳಿಸಬೇಕು. ಅವರಿಗೆ ಫ್ರಿಯಾಗಿ ಗ್ರಾಂಟ್ ಕೊಡುವುದಕ್ಕಾಗದಿದ್ದರೆ ಸಾಲದ ರೂಪದಲ್ಲಾದರೂ ಹಣವನ್ನು ಈ ವೃತ್ತಿಯಲ್ಲಿ ಯಾರು ನಿಜ ವಾಗಿ ಕಷ್ಟಕೀಡಾಗಿದ್ದಾರೋ ಅವರಿಗೆ ಕೂಡಲೇ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಅದರ ಬಗ್ಗೆ ಸ್ಪಷ್ಟೀಕರಣವನ್ನು ಮಂತ್ರಿಗಳು ಈ ಸಭೆಯಲ್ಲಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

†ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ನೇಕಾರರ ವಿಚಾರವಾಗಿ ನಾನು ಹೇಳಬೇಕಾಗಿದೆ ಜಮಖಂಡಿ ತಾಲ್ಲೂಕ್‌ನಲ್ಲಿ ಇವರಿಗೆ ವಿಶೇಷ ಪರಿಹಾರವನ್ನು ಕೂಡಲೇ ಒದಗಿಸಬೇಕು ಆ ಜನಗಳು ಮುಷ್ಕರ ಹೂಡಿ 10 ದಿವಸಗಳಾದವು. ಅನ್ನವಿಲ್ಲ. ಸಾಯುವ ಪರಿಸ್ಥಿತಿ ಬಂದಿದೆ. ಇದರಲ್ಲಿ ಬ್ರೀಚ್ ಆಫ್ ರಾ ಪ್ರಶ್ನೆ ಬರಲಿ. ಅವರಿಗೆ ಕೂಡಲೇ ಪರಿಹಾರವನ್ನು ಕೊಡಬೇಕು. ನಾನು ಇದರ ಬಗ್ಗೆ ಈಗಾಗಲೇ ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇನೆ. ಅದನ್ನು ಕೂಡಲೇ ಚರ್ಚೆಗೆ ತೆಗೆದು ಕೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಜಿ. ಪಿ. ನಂಜಯ್ಯನಮಠ (ಗುಳೇದಗುಡ್ಡ).— ಅಧ್ಯಕ್ಷರೇ, ಈಗ ಶ್ರೀಯುತ ಬಂಗಿಯವರು ಹೇಳಿದಂತೆ ನಮ್ಮ ಪ್ರದೇಶದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಹತ್ತಿಯಲ್ಲಿ ಆಗುವ ಬಟ್ಟೆಗಳ ಬಗ್ಗೆ ಹೆಚ್ಚಿಗೆ ಕಳವಳ ಉಂಟಾಗಿ ಆ ಒಂದು ಕೈಗಾರಿಕೆಗೇ ಹೆಚ್ಚಿಗೆ ಧಕ್ಕೆ ಬರುವ ಸಂಭವ ಬರುತ್ತಿದೆ. ನಾವು ಆ ವೃತ್ತಿಯಲ್ಲಿರತಕ್ಕವರಿಗೆ ಬೇಕಾದಷ್ಟು ಸಹಾಧಾನ ಹೇಳಿದ್ದೇವೆ. ಆದರೂ ಆ ಕೈಗಾರಿ ಕೋದ್ಯಮಿಗಳಿಗೆ ಈಗ ತುಂಬಾ ತೊಂದರೆಯಾಗಿದೆ. ಕೈಗಾರಿಕೆಯ ಮಂತ್ರಿಗಳು ಈ ಒಂದು ವಿಚಾರದ ಬಗ್ಗೆ ಪೊನ್ನೆತಾನೆ ಒಂದು ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದಾರೆ. ಅದರಿಂದಾಗಿ ನಮ್ಮ ಪ್ರದೇಶದ ನೇಕಾರರಿಗೆ ಸಮಾಧಾನ ಹಾಗೂ ಭರವಸೆ ಉಂಟಾಗಿದೆ. ಆದರೆ ನಾನು ಸರ್ಕಾರದವರನ್ನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಹಾಕಿಕೊಂಡಿರತಕ್ಕ ಕ್ರಮಗಳು ಸರಿಯಾಗಿವೆ. ಆದರೆ ಆ ಕಾರ್ಯಕ್ರಮಗಳೆಲ್ಲ ತೀವ್ರವಾಗಿ ಕೃತಿಯಲ್ಲಿ ಬರಬೇಕು. ಈಗ

ವಿಪರೀತ ತೊಂದರೆಯಾಗಿ ಸಾಯುತ್ತಿರುವ ನೇಕಾರರನ್ನು ಉಳಿಸುವುದಕ್ಕೆ ಸರ್ಕಾರ ಹೆಚ್ಚಿನ ಪ್ರಯತ್ನವನ್ನು ಮಾಡಬೇಕು. ಒಕ್ಕಲಿಗರ ಬರಗಾಲ ಮಳೆ ಬಂದರೆ ಹೋಗುತ್ತದೆ. ನಿಕ್ಕಪ್ಪ ವ್ಯತ್ತಿಯಲ್ಲಿರುವ ನೇಕಾರರ ಬರಗಾಲ ನೂಲು ಸಕಾಲಕ್ಕೆ ಒದಗಿಸುವುದರ ಮೂಲಕ ಹೋಗ ಬೇಕಾಗುತ್ತದೆ. ಈ ಒಂದು ಕೈಗಾರಿಕೆಯ ಕಚ್ಚಾ ಪದಾರ್ಥಗಳನ್ನು ಸರ್ಕಾರದವರು ಕೊಳ್ಳುವ ವ್ಯವಸ್ಥೆ ಮಾಡಬೇಕು. ಪ್ರತಿಯೊಬ್ಬ ನೇಕಾರನಿಗೂ ಸಾಲ ಮುಟ್ಟುವ ಏರ್ಪಾಡು ಮಾಡಬೇಕು. ನಾನು ಸಲಹೆ ಮಾಡಿದ ಪ್ರಕಾರ ಮಾನ್ಯ ಮಂತ್ರಿಗಳು ಕೂಡಲೇ ಇದರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಅಧ್ಯಕ್ಷರೇ, ಇದೇ ತಿಂಗಳು 22ನೇ ತಾರೀಖಿನಿಂದ ರಾಮದುರ್ಗದಲ್ಲಿ ಕೈಮಗ್ಗದ ನೇಕಾರರು ಸತ್ಯಾಗ್ರಹ ಹೂಡಿರುವ ಅಂಶವನ್ನು ತಮ್ಮ ಗಮನಕ್ಕೆ ನಾನು ಈಗಾಗಲೇ ತಂದಿದ್ದೇನೆ. ಆ ವಿಚಾರವನ್ನು ನಾನು ಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇನೆ. ಅವರು ಆ ವಿಚಾರವನ್ನು ಸಹಾನುಭೂತಿಯಿಂದ ಕೇಳಿಕೊಂಡ ಕೆಲವೊಂದು ಭರವಸೆಗಳನ್ನು ಕೊಟ್ಟಿದ್ದಾರೆ. ಆ ಭರವಸೆಗಳ ಬಗ್ಗೆ ಸರ್ಕಾರದವರು ಏನೇನು ಕ್ರಮಗಳನ್ನು ತೆಗೆದು ಕೊಂಡಿದ್ದಾರೆಂಬುದನ್ನು ದಯವಿಟ್ಟು ಈ ಮಾನ್ಯ ಸಭೆಗೆ ತಿಳಿಸಬೇಕು. ಅವರ ಬಗ್ಗೆ ಏನೇನು ನಿರ್ಣಯಗಳನ್ನು ತೆಗೆದುಕೊಂಡಿದ್ದಾರೋ ಅವೆಲ್ಲವನ್ನೂ ತೀವ್ರವಾಗಿ ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಂಡು, ಈಗ ಉಪವಾಸ, ಸತ್ಯಾಗ್ರಹ ಕೈಗೊಂಡಿರುವ ನೇಕಾರರಿಗೆ ಅವರ ಒಂದು ಮುಷ್ಕರವನ್ನು ಮುಂದುವರಿಸತಕ್ಕ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸರ್ಕಾರ ದವರು ಮನವಿ ಮಾಡಿಕೊಳ್ಳಬೇಕೆಂಬುದಾಗಿ ನಾನು ತಮ್ಮ ಮುಖಾಂತರ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಶಾಖೆಯ ಮಂತ್ರಿಗಳು).— ಈಗಾಗಲೇ ಸರ್ಕಾರ ದವರು ನಮ್ಮ ರಾಜ್ಯದ ಉತ್ತರ ಭಾಗದಲ್ಲಿರತಕ್ಕಂತ ನೇಕಾರರ ದುಸ್ಥಿತಿಯ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮಗಳು ಏನು ಎಂಬುದು ನಾನು ನಿನ್ನೆ ತಾನೆ ಈ ಸದನದಲ್ಲಿ ಇಟ್ಟಿರತಕ್ಕಂತಹ ಆಜ್ಞೆಯಿಂದ ವ್ಯಕ್ತವಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಬಂಗಿಯವರು, ನಂಜಯ್ಯನಮಠರವರು ಮತ್ತು ಆರ್. ಎಸ್. ಪಾಟೀಲರವರು ಏನು ಕೆಲವು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ, ಅದರಲ್ಲಿ ಸಾಕಾದಷ್ಟು ಸತ್ಯ ಇದೆ. ನಮ್ಮ ರಾಜ್ಯದಲ್ಲಿ ನೇಕಾರರು ಸಾಕಷ್ಟು ಪ್ರಮಾಣದಲ್ಲಿ ಜಮಖಂಡಿ ತಾಲೂಕಿನಲ್ಲಿ ಮತ್ತು ರಾಮದುರ್ಗ ತಾಲೂಕಿ ನಲ್ಲಿ ಕೇಂದ್ರೀಕೃತರಾಗಿದ್ದಾರೆ. ಆದ್ದರಿಂದ ಸರ್ಕಾರದವರು ಈಗಾಗಲೇ ಇದರ ಬಗ್ಗೆ ತೀರ್ಮಾನ ವನ್ನು ಮಾಡಿದ್ದಾರೆ. ನಾವು ಕನಿಷ್ಟ ಮಾಡಬಹುದಾದಂತಹ ಅಥವಾ ಅವರಿಗೆ ಒದಗಿಸ ಬಹುದಾದಂತಹ ಅನುಕೂಲಗಳನ್ನಾದರೂ ಮುಖ್ಯವಾಗಿ ಅವರ ಕಸಬನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಒದಗಿಸಿ ಕೊಡಬೇಕಾಗಿದೆ. ಮುಖ್ಯವಾಗಿ ಅವರಿಗೆ ಬೇಕಾದಂತಹ ಕಚ್ಚಾ ಪದಾರ್ಥಗಳನ್ನು ಒದಗಿಸಿಕೊಡತಕ್ಕಂಥದ್ದು. ನಮ್ಮ ದೇಶದಲ್ಲಿ ನೂಲು ಅಭಾವದ ವಸ್ತುವಾಗಿದೆ ನಿಯಂತ್ರಿತ ವಸ್ತುವಾಗಿದೆ. ನೂಲನ್ನು ಅಲಾಟ್ ಮಾಡತಕ್ಕ ಜವಾಬ್ದಾರಿ ಕೇಂದ್ರಸರ್ಕಾರ ದ್ದಾಗಿದೆ. ಬರಗಾಲದ ಬವಣೆಗೆ ಸಿಕ್ಕರತಕ್ಕಂತಹ ಪ್ರದೇಶಗಳ ಸ್ಥಿತಿಗತಿಗಳನ್ನು ಅರಿತು ಸರ್ಕಾರ ಈಗಾಗಲೇ ಕೇಂದ್ರಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾತುಕತೆ ಪ್ರಾರಂಭ ಮಾಡಿದೆ. ಅದರ ಫಲವಾಗಿ ನಮಗೆ ವಿಶೇಷವಾದಂತಹ ನೂಲನ್ನು ಕೇಂದ್ರಸರ್ಕಾರದವರು ಈಗಾಗಲೇ ಅಲಾಟ್ ಮಾಡಿದ್ದಾರೆ. ಅದರ ಆಧಾರದ ಮೇಲೆ ಬನಹಟ್ಟಿ, ಇಳಕಲ್ ಮತ್ತು ರಾಮದುರ್ಗ ಈ ಮೂರು ಕಡೆಗಳಲ್ಲಿ ನೂಲನ್ನು ಕೊಡತಕ್ಕಂತಹ ಕೇಂದ್ರವನ್ನು ಇಲಾಖೆಯ ವತಿಯಿಂದ ಪ್ರಾರಂಭ ಮಾಡುತ್ತಿದ್ದೇವೆ. ಈ ನೂಲನ್ನು ಒಂದು ಕಾರ್ಡ್ ಮೂಲಕ ಅವರಿಗೆ ಹಂಚುತ್ತೇವೆ. ಜೊತೆಗೆ ಅವರಿಗೆ ವರ್ಕಿಂಗ್ ಕ್ಯಾಪಿಟಲ್ ಏನು ಬೇಕು, ಅದರ ಸಲುವಾಗಿಯೂ ಸಹ ಆ ಜನರಿಗೆ ಹಣಕಾಸಿನ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತು ಮಾನ್ಯ ಸದಸ್ಯರು ಯಾವಾಗ ಇದನ್ನು ಪ್ರಾರಂಭ ಮಾಡುತ್ತೀರೆಂದು ಕೇಳಿದರು. ಅದನ್ನು ಇವತ್ತು ಸಾಯಂಕಾಲದ ಒಳಗೆ ಅಲ್ಲಗೆ ಕಳಿಸುತ್ತೇವೆ. ಈಗಾಗಲೇ ಅದು ಪ್ರಯಾಣ ಮಾಡುತ್ತಿರಬಹುದು. ಎರಡು ದಿವೋ ಗಳಿಗೆ ಅದು ಹೋಗುತ್ತದೆ. ಬಹುಶಃ ಮೂರನೇ ತಾರೀಕಿನಂದು ಬನಹಟ್ಟಿ ಮತ್ತು ಇಳಕಲ್‌ನಲ್ಲಿ ಇದನ್ನು ಹಂಚಲು ಪ್ರಾರಂಭ ಮಾಡುತ್ತಾರೆ. ರಾಮದುರ್ಗದಲ್ಲಿ ಸ್ವಲ್ಪ ನಿಧಾನವಾಗಿ ಬಹುದು. ಅದೇ ರೀತಿ ಇನ್ನು ಕೆಲವು ಇತರ ಭಾಗಗಳಲ್ಲಿ ನೇಕಾರರ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ನಾನು ಮೊದಲೇ ತಿಳಿಸಿರುವ ಹಾಗೆ ಒಂದು ಕೋಟಿ ನಲ್ವತ್ತು ಲಕ್ಷ ರೂಪಾಯಿಗಳ ಯೋಜನೆಯನ್ನು ಕೇಂದ್ರಸರ್ಕಾರದ ಒಪ್ಪಿಗೆಗೋಸ್ಕರ ಕಳಿಸಿಕೊಟ್ಟಿದ್ದೇವೆ. ಅವರು ಒಪ್ಪಿಗೆ ಕೊಟ್ಟ ಕೂಡಲೇ ನಾವು ಮಿಕ್ಕ ಪ್ರದೇಶಗಳಲ್ಲಿಯೂ ಸಹ ಈ ಜನರಿಗೆ ಅನುಕೂಲಗಳನ್ನು ಕಲ್ಪಿಸಿ

(ಶ್ರೀ ಎಸ್. ಎಂ. ಕೃಷ್ಣ)

ಕೊಡುವುದಕ್ಕೆ ಪ್ರಯತ್ನಗಳನ್ನು ಮಾಡುತ್ತೇವೆ. ಅದೇ ರೀತಿ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಕೋಪರೇಟಿವ್ ಬ್ಯಾಂಕುಗಳ ಮೂಲಕ ಲೋನುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಬಾಗಲೊಕೋಟೆ ನೇಕಾರರ ಬಗ್ಗೆ ಏನೂ ಹೇಳಿಲ್ಲ, ಮತ್ತು ಲೋನ್ ಕೊಡುವ ವಿಚಾರದ ಬಗ್ಗೆಯೂ ಹೇಳಿಲ್ಲ.

Sri D. DEVARAJ URS.—But the point the Hon'ble Member will appreciate is that the quantity of yarn we get is limited. Supposing we spread it everywhere, the people of Bijapur, Ramdurg and Ilkal will naturally get less just as better which if spread becomes too thin. ನನ್ನ ಆಶೆ ಏನೆಂದರೆ ಕಂಟ್ರೋಲ್ ಬೆಲೆಯಲ್ಲಿ ಇಡೀ ಸಂಸ್ಥಾನದಲ್ಲಿರ ತಕ್ಕಂತಹ ಎಲ್ಲಾ ನೇಕಾರರಿಗೂ ಇದರ ಅನುಕೂಲವನ್ನು ಕಲ್ಪಿಸಿಕೊಡಬೇಕು ಎಂದು. ಆದರೆ ಈಗ ಬಂದಿರತಕ್ಕದ್ದನ್ನು ಇವತ್ತೇ ಎಲ್ಲ ಕಡೆಗೂ ವಾಪ್ತಿ ಮಾಡಿದರೆ ಏನಾಗುತ್ತದೆ ? ಎಲ್ಲರಿಗೂ ಒಂದೇ ಸಾರಿ ಕೊಡುವಷ್ಟು ನೂಲು ನಮ್ಮಲ್ಲಿ ಇಲ್ಲ ; ಅಷ್ಟೆ.

ಶ್ರೀ ಜಿ. ಪಿ. ನಂಜಯ್ಯನಮಠ.—ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಕೈಗಾರಿಕಾ ಮಂತ್ರಿಯವರಲ್ಲಿ ಒಂದು ವಿನಂತಿ. ಈಗ ಅಲ್ಲಿರತಕ್ಕ ಜನ ಸತ್ಯಾಗ್ರಹ ಮಾಡಿದ್ದಾರೆ ; ಕೆಲವರು ಮಾಡುವವರು ಇದ್ದಾರೆ. ಆದ್ದರಿಂದ ಸರ್ಕಾರದವರು ಅವರಿಗೆ ಸಹಾನುಭೂತಿ ತೋರಿಸುವ ಸಲುವಾಗಿ ಅವರು ಸತ್ಯಾಗ್ರಹವನ್ನು ನಿಲ್ಲಿಸುವ ಹಾಗೆ ಒಂದು ತಂತಿಯನ್ನು ಕಳಿಸಿಕೊಡ ಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ವಿ. ವಾಯಿ (ಶಿರಹಟ್ಟಿ).—ಶಿರಹಟ್ಟಿ ಮತ್ತು ಲಕ್ಷ್ಮೇಶ್ವರದಲ್ಲಿ ನೇಕಾರ ಜನರು ಬಹಳ ಇದ್ದಾರೆ. ಅಲ್ಲಯೂ ಜನರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ನಾನು ಮೊನ್ನೆ ಹೋದಾಗ ಸರ್ಕಾರದವರು ನಿಮ್ಮ ಬಗ್ಗೆ ಸಹಾನುಭೂತಿಯನ್ನು ತೋರಿಸಿ ಸೂಕ್ತವಾದ ಕಾರ್ಯಕ್ರಮಗಳನ್ನು ತಗೆದುಕೊಳ್ಳುತ್ತಾರೆಂದು ಹೇಳಿ, ಸಮಜಾಯಿಸಿ ಉಪವಾಸ ಸತ್ಯಾಗ್ರಹ ವನ್ನು ಬಿಡಿಸಿದ್ದೇನೆ. ಆದ್ದರಿಂದ ಅಲ್ಲಿರತಕ್ಕ ನೇಕಾರರಿಗೂ ಬಾಕಿ ಕಡೆಗಳಲ್ಲಿ ಕೊಡುತ್ತಿರುವ ನವಲತ್ತು ಮತ್ತು ಸಹಾಯವನ್ನು ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಮತ್ತು ಅಲ್ಲಿರತಕ್ಕಂತಹ ನ್ಯಾಷನಲೈಸ್ಡ್ ಬ್ಯಾಂಕುಗಳಿಂದ ಸಾಲಗಳನ್ನು ಒದಗಿಸಿಕೊಡಲು ತಕ್ಕ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಎಂ. ಬಿಂಗಿ.—ಇವತ್ತು ಕಂಟ್ರೋಲ್ ಧಾರಣೆಯಲ್ಲಿ ನೂಲು ತಂದು ಜಮಖಂಡಿ ಮುಂತಾದ ಪ್ರದೇಶಗಳಿಗೆ ಒದಗಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಜೆಕ್ಸ್‌ಟೈಲ್ ಕಮಿಶನರ್ ಮೇಲೆ ಮತ್ತು ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ತಂದು ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಅಭಾವ ವಿರುವ ಪ್ರದೇಶದಲ್ಲಿ ನೂಲು ದೊರೆಯುವಂತೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಅದೇ ರೀತಿ ಬಾಗಲಕೋಟೆ ಮತ್ತಿತರ ಪ್ರದೇಶಗಳಲ್ಲಿ ಕನಿಷ್ಠ ಪಕ್ಷ ಪ್ರತಿಯೊಂದು ಮಗ್ಗಕ್ಕೆ 300 ರೂಪಾಯಿಯಂತೆ ಸಾಲ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಇದು ಮಾಡದೆ ಹೀಗೆ ಬಡುತ್ತಾ ಹೋದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸಂಭವ ಇದೆ. ಅದೇ ರೀತಿ ನಮ್ಮ ಮಿತ್ರರು ಹೇಳಿದಂತೆ ಅಲ್ಲಿ ಸತ್ಯಾಗ್ರಹ ಮಾಡುವವರಿಗೆ ಸಹಾನು ಭೂತಿಯನ್ನು ತೋರಿಸಿ ಒಂದು ತಂತಿಯನ್ನು ಕಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ ನೇಕಾರರ ಬಗ್ಗೆ ಅನೇಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ, ಬಹಳ ಸಂತೋಷ. ಆದರೆ ಸರ್ಕಾರಕ್ಕೂ ಅಷ್ಟೆ ಅವರ ಬಗ್ಗೆ ಸಹಾನುಭೂತಿ ಮತ್ತು ಕಳಕಳಿ ಇದೆ. ಆದರಲ್ಲೂ ನಮ್ಮ ಸರ್ಕಾರದಲ್ಲಿ ನೇಕಾ ರರ ಬಗ್ಗೆ ವಿಶೇಷವಾದ ರೀತಿಯ ಕಳಕಳಿ ನವ ಗೆ ಇದೆ. ಅದಕ್ಕೆ ಕಾರಣ ಬೇರೆ ಇದೆ. ಇದರಲ್ಲಿ ಎರಡು ಭಾಗಗಳಾಗಿ ವಿಂಗಡಿಸಬೇಕು. ನೇಕಾರರಿಗೆ ಜನರಲ್ ಆಗಿ ಏನು ಸಹಾಯ ಮಾಡಬೇಕು ಎನ್ನುವಂಥಾದ್ದು ಒಂದು. ಕಷ್ಟಕಾಲದಲ್ಲಿ ಸಿಕ್ಕಿಕೊಂಡಿರತಕ್ಕ ಮತ್ತು ಬರಗಾಲಕ್ಕೆ ತ ತ್ತಾಗಿ ರುವ ನೇಕಾರರಿಗೆ ಯಾವರೀತಿ ಸಹಾಯ ಮಾಡಬೇಕೆಂಬುದು ಮತ್ತೊಂದು. ಈ ಎರಡನ್ನೂ ಒಂದಕ್ಕೊಂದು ಬೆರೆಸುವುದು ಬೇಡ. ನಾವು ಈಗ ಅವರಿಗೆ ನೂಲಿನ ಸಹಾಯ ಮತ್ತು ಧನಸಹಾಯ ಮಾಡಬೇಕಾಗಿದೆ. ಇವರ ಬಗ್ಗೆ ಕೇಂದ್ರದಲ್ಲಿ ಒಂದು ದೊಡ್ಡ ಅಲೋಚನೆ ಇದೆ. ಅದು

ಏನೆಂದರೆ ಈಗ ಮಿಲ್ಲುಗಳಲ್ಲಿ 40, 60, 80, 100 ಈ ರೀತಿ ನೂಲಿನ ಕೌಂಟುಗಳು ಏನು ಬರುತ್ತವೆ ಅವುಗಳಲ್ಲಿ ಕೆಲವು ಲೋಯರ್ ಕೌಂಟಿನ ನೂಲನ್ನು ಪೂರ್ತಿಯಾಗಿ ಹ್ಯಾಂಡ್ಲೂಮ್ ಕೈಗಾರಿಕೆಗೆ ಮೀಸಲಾಗಿಡಬೇಕಾಗಿದೆ. ಇದನ್ನು ಕೇಂದ್ರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅದಕ್ಕೆ ಸಂಬಂಧಪಟ್ಟ ಆರ್ಡರು ಇನ್ನೂ ಜಾರಿಗೆ ಬಂದಿಲ್ಲ. ಈ ವರ್ಷ ನಾನಾಕಾರಣಗಳಿಂದ ನೂಲಿನ ಡಿಮ್ಯಾಂಡ್ ಜಾಸ್ತಿ ಇದೆ. ಆದರೆ ಅದಕ್ಕೆ ಸಾಕಷ್ಟು ಡಿಮ್ಯಾಂಡ್ ಅನ್ನು ಮೀಟ್ ಮಾಡುವುದಕ್ಕೆ ಪ್ರೊಡಕ್ಷನ್ ಇಲ್ಲ. ಇಂಥಾ ಒಂದು ಸನ್ನಿವೇಶದಲ್ಲಿ ನೇಕಾರರಿಗೆ ಬಹಳ ಕಷ್ಟ ಬಂದಿದೆ. ಈಗ ನೂಲಿಗೆ ಡಿಮ್ಯಾಂಡ್ ಜಾಸ್ತಿ ಇರುವುದರಿಂದ ಬ್ಲಾಕ್ ಮಾರ್ಕೆಟ್ಟಿನಲ್ಲಿ ನೂಲನ್ನು ಕೊಂಡು ಬಟ್ಟೆಯನ್ನು ತಯಾರಿಸಿ ಅದನ್ನು ಮಾರ್ಕೆಟ್ಟಿನಲ್ಲಿ ಎಷ್ಟಕ್ಕೆ ಹೋಗುತ್ತದೆಯೋ ಅಷ್ಟಕ್ಕೆ ಮಾರಿ ಜೀವನ ಮಾಡತಕ್ಕ ಪರಿಸ್ಥಿತಿ ಬಂದಿದೆ. ಬರಗಾಲ ಪೀಡಿತ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಜನರಲ್ ಆಗಿ ನೇಕಾರರ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕು ಎಂದು ಈಗಾಗಲೇ ನಾವು 2 ಮುಖ್ಯ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಬಹಳ ದಿವಸಗಳಿಂದ ನೇಕಾರರ ಬಗ್ಗೆ ಒಂದು ಡಿಮ್ಯಾಂಡ್ ಎನಿದೆ ಎಂದರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗೆ ಇದ್ದ ಹಾಗೆ ಪ್ರತ್ಯೇಕವಾಗಿ ಪೇವರ್ಸ್‌ಗಳನ್ನು ನೋಡಿಕೊಳ್ಳುವುದಕ್ಕೆ ಒಂದು ಡೈರೆಕ್ಟೋರೇಟ್ ಕೊಡಬೇಕೆಂದು ಬಹಳ ದಿವಸಗಳ ಡಿಮ್ಯಾಂಡ್ ಇತ್ತು. ಅದನ್ನು ಈ ಸಾರಿ ಕಾರ್ಯಗತ ಮಾಡಿ ಅವರಿಗೆ ಪ್ರತ್ಯೇಕವಾದ ಒಂದು ಡೈರೆಕ್ಟೋರೇಟ ಮಾಡಬೇಕೆಂದಿದ್ದೇವೆ. ನೇಕಾರರಿಗೆ ಸಂಬಂಧಪಟ್ಟ ಹಾಗೆ 2½ ಸಾವಿರ ಸೊಸೈಟಿಗಳು ಇದ್ದುವು. ದುರದೃಷ್ಟವಶಾತ್ 1500 ಸೊಸೈಟಿಗಳು ಮುಚ್ಚಿಹೋಗಿವೆ. ಆ ರೀತಿ ಅವುಗಳನ್ನು ಮುಚ್ಚುವುದಕ್ಕೆ ನಾನಾ ಕಾರಣಗಳು ಇವೆ. ಆ ಸೊಸೈಟಿಗಳು ಸರಿಯಾಗಿ ವ್ಯವಹಾರ ನಡೆಸುತ್ತಾ ಇರಲಿಲ್ಲ ಎಂದು ಕ್ಲೋಸಾಗಿವೆ. ಈಗ ಕೆಲಸ ಮಾಡುವವು ಅರ್ಧ ಇವೆ. ಈಗ ಹಾಲಿ ಸೊಸೈಟಿಗಳನ್ನು ಏನು ಕ್ಲೋಜ್ ಮಾಡಿದ್ದಾರೆ ಅವುಗಳನ್ನು ಕಂಪ್ಲೀಟಾಗಿ ಕ್ಲೋಜ್ ಮಾಡಿ ಹೊಸದಾಗಿ ಪ್ರಾರಂಭ ಮಾಡಿದರೂ ಪರವಾಯಿಲ್ಲ ಅವುಗಳಿಂದ ನೇಕಾರರಿಗೆ ಹಣ ಸಹಾಯ ದೊರಕುವ ಹಾಗೆ ಮಾಡಬೇಕು, ನೇಕಾರರ ಕೆಲಸ ಮಾಡತಕ್ಕ ಸಣ್ಣಪುಟ್ಟ ಜನಾಂಗ ಯಾರಿದ್ದಾರೆ ಅವರಿಗೆ ಒಂದು ಸಹಾಯವನ್ನು ಮಾಡಬೇಕೆಂಬ ದೃಷ್ಟಿಯಿಂದ ಸೊಸೈಟಿಗಳು ಬ್ಯಾಂಕಿನಿಂದ ಹಣ ಪಡೆದು ಅವರಿಗೆ ಹಂಚಲು ಒಂದು ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಬ್ಯಾಂಕ್ ಸಾಲಕ್ಕೆ ಸರ್ಕಾರ ಗ್ಯಾರಂಟಿ ನೀಡಬೇಕೆಂದು ಸಹಾಯ ಕೊಡಬೇಕೆಂದು ನಾವು ಅಪೇಕ್ಷೆ ಪಟ್ಟಿದ್ದೇವೆ. ನಾವು ಈಗಾಗಲೇ ಅವರಿಗೆ ಸಹಾಯ ಧನ ಕೊಡಬೇಕು ಎಂದು ಇಂಡಿವಿಜುಯಲ್‌ಗಳಿಗೆ ಸೊಸೈಟಿಗಳ ಮುಖಾಂತರ ಸಾಲ ಕೊಡಿಸುವುದಕ್ಕೆ ಏರ್ಪಾಟು ಮಾಡುತ್ತಿದ್ದೇವೆ.

ಇನ್ನೊಂದು ವಿಶೇಷವಾದ ವಿಚಾರವೇನೆಂದರೆ ನೂಲನ್ನು ಕಂಟ್ರೋಲ್ ರೇಟಿನಲ್ಲಿ ಎಲ್ಲರಿಗೂ ಹಂಚುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಡಿಮ್ಯಾಂಡ್ ಜಾಸ್ತಿ ಇದೆ. ಪ್ರೊಡಕ್ಷನ್ ಕಡಿಮೆ ಇದೆ. ಕೇಂದ್ರ ಸರ್ಕಾರದವರು ಒಂದು ಲಕ್ಷ ಟನ್ ನೂಲನ್ನು ಕೊಟ್ಟು ಅದನ್ನು ಎಲ್ಲರಿಗೂ ಹಂಚಿ ಎಂದು ಹೇಳಬಹುದು. ಆದರೆ ಅದನ್ನು ಎಲ್ಲಾ ಕಡೆಗಳಲ್ಲಿಯೂ ಹಂಚುವುದಕ್ಕೆ ಹೋದರೆ ಯಾರಿಗೂ ಅದು ತೃಪ್ತಿಕರವಾಗಿ ಸಿಕ್ಕುವುದಿಲ್ಲ. ಈ ಕಾರಣದಿಂದ ನಾವು ಏನು ಮಾಡಿದ್ದೇವೆ ಎಂದರೆ ಕಷ್ಟ ಇರತಕ್ಕ ಕೆಲವು ಪ್ರದೇಶಗಳಿಗೆ ಎಂದರೆ ಗದಗ್, ಬೆಟಗೇರಿ ಶಿರಹಟ್ಟಿ ಮುಂತಾದ ಪ್ರದೇಶಗಳಿಗೆ ಹಂಚಬೇಕೆಂದು ಮಾಡಿದ್ದೇವೆ. ಈಗ ನಾವು ಒಟ್ಟಿನಲ್ಲಿ ನೂಲು ಕೊಡಬೇಕೆಂದು ಕೇಳುತ್ತಿದ್ದೇವೆ. ಆರ್ಡರ್ ಪ್ಲೇಸ್ ಮಾಡಿದ್ದೇವೆ. ಆದರೆ ಅವರು ಇನ್ನೂ ನಮಗೆ ಕೊಟ್ಟಿಲ್ಲ. ಮತ್ತೆ ಅವರಿಗೆ ಬರೆದಿದ್ದೇವೆ. ಮೊನ್ನೆ ನಮ್ಮ ಆಫೀಸರು ಬೊಂಬಾಯಿಗೆ ಹೋಗಿ ಟೆಕ್ಸ್‌ಟೈಲ್ ಕಮಿಷನರ ಹತ್ತಿರ ಹೋಗಿ ಬಂದಿದ್ದಾರೆ. ಪುನಃ ಟೆಕ್ಸ್‌ಟೈಲ್ ಕಮಿಷನರು ಇಲ್ಲಿಗೆ ಬರುತ್ತಾರೆ. ಈ ರೀತಿಯಾಗಿ ಆ ಬಗ್ಗೆ ನಾವು ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೇವೆ. ನೇಕಾರರ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ನಾವು ಇಷ್ಟೊಂದು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಾನು ತಮ್ಮಲ್ಲಿ ಹೇಳುವುದಾದರೆ ಸಂದರ್ಭ ಸಿಕ್ಕಿದಾಗಲೆಲ್ಲಾ ನಾನು ಕೇಂದ್ರ ಸರ್ಕಾರದವರಲ್ಲಿ ಈ ಬಗ್ಗೆ ನಾನು ಮಾತನಾಡಿದ್ದೇನೆ. ನೇಕನೆರರಿಗೆ ಬೇಕಾಗಿರತಕ್ಕ 20, 40, 60, ಕೌಂಟಿನ ನೂಲಿನನ್ನು ಕಡ್ಡಾಯವಾಗಿ ಹ್ಯಾಂಡ್ಲೂಂ ಇಂಡಸ್ಟ್ರಿಗೇ ಘಾಸಲಾಗಿಟ್ಟು ದೊಡ್ಡ ದೊಡ್ಡ ಮಿಲ್ಲುಗಳಿಗೆ ಫೈನ್ ವೆರೈಟಿ ಮಾಡುವುದಕ್ಕೆ ಕೊಡಲಿ ಎನ್ನುವುದು ನಮ್ಮ ವಾದ. ಈ ವಿಚಾರವನ್ನು ನಾನು ಅನೇಕ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರಲ್ಲಿ ಚರ್ಚೆ ಮಾಡಿದ್ದೇನೆ. ಕೇಂದ್ರದಲ್ಲಿ ಒತ್ತಾಯ ಮಾಡಿ ಹೇಳಿದ್ದೇನೆ. ಭಾರತ ದೇಶದಲ್ಲಿ ನಮ್ಮಾರು ಪ್ರಪಂಚದಲ್ಲೆ ಎಲ್ಲೂ ತಯಾರು ಮಾಡದೆ ಇರುವಷ್ಟು ವೆರೈಟಿ ಬಟ್ಟೆಗಳನ್ನು ಎಂದರೆ 37 ಸಾವಿರ ವೆರೈಟಿ ಬಟ್ಟೆಗಳನ್ನೆ ತಯಾರು ಮಾಡುತ್ತಿದ್ದಾರೆ. ಜನಗಳು ಅವರಿಗೆ ಇಷ್ಟ ಬಂದಹಾಗೆ ಡ್ರೆಸ್ ಹಾಕಿಕೊಳ್ಳುತ್ತಾರೆ. ಆದ್ದರಿಂದ

(ಶ್ರೀ ಡಿ. ದೇವರಾಜ ಅರಸ್)

37 ಸಾವಿರ ಪೆರೆಟ್ಟಿ ಬಟ್ಟೆಗಳನ್ನು ತಯಾರು ಮಾಡುವುದರಿಂದ ಏನಾದರೂ ಒಂದು ಅನಾಹುತ ಬರುತ್ತದೆ ಎಂದು ಆ ವೆರೈಟಿಗಳ ಪ್ಲಾನಿಂಗ್ ಕಮಿಷನ್‌ನವರು ರೆಡ್ಯೂಜ್ ಮಾಡಬೇಕೆಂದಿದ್ದಾರೆ. ಜಪಾನ್‌ನಲ್ಲಿ 5—6 ಸಾವಿರ ವೆರೈಟಿ ಬಟ್ಟೆಗಳನ್ನು ತಯಾರು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಈ ರೀತಿ 37 ಸಾವಿರ ವೆರೈಟಿ ಮಾಡುವುದು ಸರಿಯಲ್ಲ ಎನ್ನುವ ಅಭಿಪ್ರಾಯಕ್ಕೆ ಪ್ಲಾನಿಂಗ್ ಕಮಿಷನ್ನಿನವರು ಬಂದಿದ್ದಾರೆ. ನಮ್ಮ ದೇಶದಲ್ಲಿ ನಾನಾತರಹ ವೆರೈಟಿ ಬಟ್ಟೆಗಳನ್ನು ತಯಾರಿಸುತ್ತಿದ್ದಾರೆ. ಜನಗಳೂ ನಾನಾತರಹ ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಹೆಂಗಸರೂ ನಾನಾತರಹ ಸೀರೆಗಳನ್ನು ಉಡುತ್ತಿದ್ದಾರೆ. ಗಂಡಸರು ನಾನಾತರಹ ಪಂಚೆಗಳನ್ನು ಉಟ್ಟುಕೊಳ್ಳುತ್ತಿದ್ದಾರೆ ಇದರಿಂದ ನೇಕಾರರಿಗೆ ಒಂದು ದೊಡ್ಡ ಕುತ್ತು ಉಂಟಾಗಿದೆ. ಆದಕ್ಕಾಗಿಯೇ ಪ್ಲಾನಿಂಗ್ ಕಮಿಷನ್ನಿನವರು ನಮ್ಮದೇಶದಲ್ಲಿ 37 ಸಾವಿರ ವೆರೈಟಿ ಬಟ್ಟೆಗಳನ್ನು ತಯಾರು ಮಾಡುವುದನ್ನು ರೆಡ್ಯೂಜ್ ಮಾಡಬೇಕೆಂದಿದ್ದಾರೆ. ನೇಕಾರರಿಗೆ ಅನುಕೂಲ ಮಾಡುವ ದೃಷ್ಟಿಯಿಂದ 40—60 ಮುಂತಾದ ವರ್ಗದ ನೂಲನ್ನು ಮಿಲ್ಲುಗಳಿಗೆ ಕೊಡುವುದನ್ನು ನಿಲ್ಲಿಸಿ ನೇಕಾರರಿಗೆ ಪ್ರತ್ಯೇಕವಾಗಿ ಹ್ಯಾಂಡ್ಲೂಮ್ ಕೈಗಾರಿಕೆಗೆ ಮೀಸಲಾಗಿಡಬೇಕೆಂದು ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಎಲ್ಲಾ ಕಡೆಗಳಲ್ಲೂ ನೇಕಾರರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅದು ಸರಿಯಲ್ಲ. ಸತ್ಯಾಗ್ರಹ ಮಾಡುವುದರಿಂದ ಸರ್ಕಾರದಿಂದ ಏನೋ ಅನುಕೂಲ ಸಿಕ್ಕುತ್ತದೆ ಎಂದು ತಿಳಿದುಕೊಂಡಿದ್ದರೆ ಅವರಿಗೆ ನಾನು ನಮ್ರತೆಯಿಂದ ತಿಳಿಸುತ್ತೇನೆ ಸತ್ಯಾಗ್ರಹ ಮಾಡಿ ಸರ್ಕಾರದಿಂದ ಅನುಕೂಲ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಯಾರೂ ಸತ್ಯಾಗ್ರಹ ಮಾಡಬೇಕಾದ ಅಗತ್ಯವಿಲ್ಲ. ಇಲಕಲ್ ಮತ್ತು ಜಮಖಂಡಿಯಲ್ಲಿ ಸತ್ಯಾಗ್ರಹ ಮಾಡಿದ್ದರಿಂದ ಅವರಿಗೆ ಅನುಕೂಲ ಮಾಡಿಕೊಟ್ಟರು. ಆದ್ದರಿಂದ ನಮ್ಮ ಊರಿನಲ್ಲಿಯೂ ನಾವು ಸತ್ಯಾಗ್ರಹ ಮಾಡೋಣ ಎಂದು ಯಾರಾದರೂ ನೇಕಾರರಾಗಲೀ ಅಥವಾ ಯಾರೇ ಆಗಲೀ ಸತ್ಯಾಗ್ರಹ ಮಾಡೋಣ ಎಂದರೆ ಅಂಥಾದಕ್ಕೆ ಸರ್ಕಾರದವರು ಬೆಂಬಲ ಕೊಡುವುದಿಲ್ಲ. ಆದ್ದರಿಂದ ಜನಗಳು ಸತ್ಯಾಗ್ರಹ ಮಾಡುವಂತಹ ಭಾವನೆಗಳನ್ನು ನಿಲ್ಲಿಸಬೇಕು. ಈಗ ಇರ್ಲರತಕ್ಕ ಎಲ್ಲಾ ಕಷ್ಟಸುಖಗಳನ್ನೂ ನಾನು ಹೇಳಿದ್ದೇನೆ.

I appeal to you Madam and through you to the House and all those people who have squat on satyagraha let them desist it and let them give it up. Government is there to do whatever is possible under the circumstances.

3-30 P. M.

ಶ್ರೀ ಡಿ. ಹಲಗೇಗೌಡ (ಪಾಂಡವಪುರ) —ಮಾನ್ಯ ಮಂತ್ರಿಗಳು ಈಗತಾನೆ ಮಾತನಾಡುತ್ತಾ ಕೇಂದ್ರ ಸರ್ಕಾರದಿಂದ ಎಲ್ಲ ರೀತಿಯ ಸಹಾಯ ಪಡೆದುಕೊಂಡು ನೇಕಾರರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದು ಬಹಳ ಶ್ಲಾಘನೀಯವಾದುದು. ಆದರೆ ಸರ್ಕಾರದವರು ಎಷ್ಟೇ ಸಹಕಾರ ಕೊಟ್ಟರೂ ಸಹ ಅವರು ಬದುಕುವುದಕ್ಕೆ ಕಷ್ಟವಾಗುತ್ತದೆ. ಏಕೆಂದರೆ ಅವರು ಮಿಲ್ ಬಟ್ಟೆಗಳ ಜೊತೆಯಲ್ಲಿ ಸರ್ಧಿಸುವಾಗಿ ಹೋರಾಡುವುದು ಕಷ್ಟವಾಗುತ್ತದೆ. ಏಕೆಂದರೆ ಜನರು ಹೆಚ್ಚಾಗಿ ಮಿಲ್ ಬಟ್ಟೆಗಳನ್ನು ಕೊಳ್ಳುತ್ತಿರೆಯೇ ಹೊರತು ಕೈಮಗ್ಗದ ಒರಟು ಬಟ್ಟೆಗಳನ್ನು ಕೊಳ್ಳುವುದಿಲ್ಲ. ಈ ಕಾರಣದಿಂದ ಸರ್ಕಾರದವರು ಕೈಮಗ್ಗದವರು ತಯಾರು ಮಾಡತಕ್ಕಂಥ ಬಟ್ಟೆಗಳನ್ನು ಮಿಲ್‌ನವರು ತಯಾರಿಸಬಾರದೆಂದು ನಿರ್ಬಂಧವನ್ನು ಹಾಕಬೇಕು. ಇಲ್ಲದಿದ್ದರೆ ಕೈಮಗ್ಗದವರು ಬದುಕುವುದು ಕಷ್ಟವಾಗುತ್ತದೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ದೇಶದಲ್ಲಿ ಉತ್ಪತ್ತಿ ಜಾಸ್ತಿಯಾಗಬೇಕು, ಎಲ್ಲರೂ ಬಾಳಿಯಬೇಕೆಂದು ಈ ಸರ್ಕಾರದವರು ಹೇಳುತ್ತಿರುವುದರಿಂದ, ಕೈಮಗ್ಗದವರಿಗೆ ಸಾಕಷ್ಟು ನೂಲನ್ನು ಕೇಂದ್ರಸರ್ಕಾರದಿಂದ ಪಡೆದುಕೊಂಡು ಒದಗಿಸದಿದ್ದರೆ ಅವರು ಬದುಕುವುದಾದರೂ ಹೇಗೆ? ಮತ್ತು ಕೈಮಗ್ಗದವರು ತಯಾರು ಮಾಡುವಂತಹ ಬಟ್ಟೆಗಳನ್ನು ಮಿಲ್‌ನವರು ತಯಾರು ಮಾಡದಂತೆ ಸರ್ಕಾರದವರು ನಿರ್ಬಂಧ ಹಾಕದಿದ್ದರೆ ಅವರು ತಯಾರು ಮಾಡುವ ಬಟ್ಟೆಗಳು ಪೇಟೆಯಲ್ಲಿ ಖರ್ಚಾಗುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ಎಲ್ಲ ಪ್ರಯತ್ನಗಳನ್ನೂ ನಾವು ಮಾಡುತ್ತಿದ್ದೇವೆ. ಮುಂದಿನ ತಿಂಗಳು ಟೆಕ್ಸ್‌ಟೈಲ್ಸ್ ಕಮೀಷನರ್ ಅವರು ಬಂದಾಗ ಅವರ ಹತ್ತಿರ ಕೂಡ ಮಾತನಾಡುತ್ತೇವೆ. ಈಗ ಏಕಾಕಿ ಬದಲಾವಣೆ ಮಾಡುವುದು ಕಷ್ಟವಾಗುತ್ತದೆ. ಮಿಲ್‌ನವರು ಬಟ್ಟೆಗಳನ್ನು ತಯಾರು ಮಾಡುವುದು ಬೇಡ ಎಂದು ಹೇಳಬಿಟ್ಟರೆ ಹೊರದೇಶಗಳಿಗೆ ಕಳಿಸುವ ಬಟ್ಟೆಗಳಿಂದ ನಮಗೆ ಬರುವ ಫಾರಿನ್ ಎಕ್ಸ್‌ಚೇಂಜ್ ತಪ್ಪಿಹೋಗುತ್ತದೆ. ಮತ್ತು ಇತರೇ ಬೇರೆ ಬೇರೆ ಪರಿಣಾಮಗಳು ಉಂಟಾಗುತ್ತವೆ. ಆದ್ದರಿಂದ ಏನು ಬದಲಾವಣೆ ಮಾಡಬೇಕಾದರೂ ಕಾಲ ಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಕೈಮಗ್ಗದವರ ಕೇವಲ ರೇಷ್ಮೆ ಬಟ್ಟೆಗಳನ್ನೇ ನೇಯುವಂತೆ ಮಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಎಲ್ಲರೂ ರೇಷ್ಮೆ ಬಟ್ಟೆಗಳನ್ನೇ ಉಟ್ಟುಕೊಂಡರೆ ಹತ್ತಿ ಬಟ್ಟೆಗಳನ್ನು ಉಟ್ಟುಕೊಳ್ಳುವವರು ಯಾರು ?

ಶ್ರೀ ಡಿ. ದೇವರಾಜ ಅರಸ್.—ವಿಷಯಗಳನ್ನು ಪೂರ್ತಾ ತಿಳಿದುಕೊಂಡು ಯಾವುದನ್ನು ಬದಲಾವಣೆ ಮಾಡಬೇಕಾಗುತ್ತದೆಂದು ನಾನು ಮೊದಲೇ ಹೇಳಿದೆ.

[MR. DEPUTY SPEAKER in the Chair]

Government Grants (Mysore Extension) Bill, 1972.

Motion to Consider (Debate continued)

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಮುಂದೆ ಮಾನ್ಯ ಸಚಿವರು ತಂದಿರತಕ್ಕ ಬಿಲ್ ಬಹಳ ಸ್ವಾಗತಾರ್ಹವಾದುದು. ಸರ್ಕಾರದವರು ಭೂ ಹೀನರಿಗೆ ಉಚಿತವಾಗಿ ಕೊಡುವ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡಬಾರದೆಂಬ ಉದ್ದೇಶದಿಂದ ಇದನ್ನು ತಂದಿದ್ದಾರೆ. ಇದರ ಬಗ್ಗೆ ಹೇಳುವುದಕ್ಕೆ ಮೊದಲು ಒಂದು ಮಾತನ್ನು ಹೇಳುತ್ತೇನೆ. ನಮ್ಮ ಎದುರು ಪಕ್ಷದಲ್ಲಿ ಅನೇಕ ಹಿರಿಯ ಮಿತ್ರರು ಇದ್ದಾರೆ. ಅವರಲ್ಲಿ ನಮಗೆ ಸ್ವಾತಂತ್ರ್ಯ ಬಂದಮೇಲೆ ಸರ್ಕಾರ ನಡೆಸಿದಂತಹವರು ಕೆಲವು ಇದ್ದಾರೆ. ನಮಗೆ ಸ್ವಾತಂತ್ರ್ಯ ಬಂದಮೇಲೆ ಎಷ್ಟು ಲಕ್ಷ ಜನರಿಗೆ ಜಮೀನು ಹಂಚಿಕೆಯಾಗಿದೆ ಎಂಬುದನ್ನು ತುಲನೆ ಮಾಡಿ ನೋಡಿದಾಗ, ಲಕ್ಷಗಟ್ಟಲೆ ಜನರು ಜಮೀನನ್ನು ಪಡೆದಿದ್ದರೂ ಸಹ ಅವರುಗಳು ಕಷ್ಟ ನಷ್ಟಕ್ಕೆ ಒಳಗಾಗಿ ತಮಗಿದ್ದ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡಿಬಿಟ್ಟಿದ್ದಾರೆ. ಇಂತಹ ಒಂದು ಸನ್ನಿವೇಶದಲ್ಲಿ ಈ ಬಿಲ್ಲಿನ ಔಚಿತ್ಯವಾದರೂ ಏನು ಎಂದು ತಮ್ಮ ಮುಖಾಂತರ ತಿಳಿಯಬಯಸುತ್ತೇನೆ. ಈ ಹಿಂದೆ ಸರ್ಕಾರದವರು ಪುಕಸಟ್ಟೆಯಾಗಿ ಕೊಟ್ಟ ಜಮೀನನ್ನು ಪರಭಾರೆ ಮಾಡಿದ್ದರೆ, ಅಂತಹವರ ಬಗ್ಗೆ ಸರ್ಕಾರದವರು ಏನು ಆಲೋಚನೆ ಮಾಡಿದೆ ಎಂಬುದು ಗೊತ್ತಿಲ್ಲ. ಭೂ ಸುಧಾರಣೆಯಿಂದ ಸರ್ಕಾರದ ವಶಕ್ಕೆ 3-4 ಲಕ್ಷ ಎಕರೆ ಜಮೀನು ದೊರೆಯಬಹುದಾದರೂ ಸಹ, ಅದನ್ನು ಭೂಮಿ ಇಲ್ಲದ 80 ಲಕ್ಷ ಜನರಿಗೆ ಯಾವ ರೀತಿ ಹಂಚುತ್ತಾರೆಂಬುದು ಗೊತ್ತಾಗುತ್ತಿಲ್ಲ. ಮತ್ತು ಈ ಬಿಲ್ಲಿನಿಂದ ಯಾವ ರೀತಿ ಉಪಯೋಗವಾಗುತ್ತದೆಂಬುದು ಸಹ ಅರ್ಥವಾಗುತ್ತಿಲ್ಲ. ಇದನ್ನೆಲ್ಲಾ ನೋಡಿದಾಗ ಈ ಮಂತ್ರಿಮಂಡಲದವರು ಅನ್ನದ ಜನಪ್ರಿಯತೆಯನ್ನು ಗಳಿಸುವುದಕ್ಕೋಸ್ಕರ ಈ ಬಿಲ್ಲನ್ನು ತಂದಿದ್ದಾರೆ ಶಿವಾಯ, ಇದರಿಂದ ಬಡ ಜನತೆಗೆ ಯಾವ ಅನುಕೂಲವೂ ಆಗುವುದಿಲ್ಲ. ಇವರಲ್ಲಿ ಏನಾದರೂ ಮಾನವೀಯತೆ ಇದ್ದರೆ, ಬಡವರ ಬಗ್ಗೆ ಅನುಕಂಪ ಇದ್ದರೆ, ಹಿಂದೆ ಯಾರು ಯಾರು ಉದ್ದೇಶಪೂರ್ವಕವಾಗಿ ಸರ್ಕಾರದಿಂದ ಜಮೀನು ಪಡೆದು ದುರುದ್ದೇಶದಿಂದ ಬೇರೆಯವರಿಗೆ ಮಾರಾಟ ಮಾಡಿದ್ದರೆ, ಅಂತಹವರಿಗೆ ಶಿಕ್ಷೆ ವಿಧಿಸುತ್ತೇವೆಂದು ಹೇಳಿದ್ದರೆ ಇವರಿಗೆ ಶಹಭಾಷ್‌ಗಿರಿಯನ್ನು ಕೊಡಬಹುದಾಗಿತ್ತು. ಈ ಬಿಲ್ ಬಗ್ಗೆ ಮಾತನಾಡಿದ ಅನೇಕ ಸದಸ್ಯರುಗಳು ಈ ಬಿಲ್ಲನ್ನು ಪೂರ್ವಾನ್ವಯವಾಗಿ ಜಾರಿಗೆ ತರಬೇಕೆಂದು ಹೇಳಿದರು. ಈ ವಿಷಯದಲ್ಲಿ ನಾನು ಒಬ್ಬ ರೈತನಾಗಿ ಪ್ರಸ್ತಾಪ ಮಾಡುವುದೇನೆಂದರೆ, ಅನೇಕರು ತಮ್ಮ ಸ್ವಂತ ಶ್ರಮದಿಂದ ಹಣ ಸಂಪಾದನೆ ಮಾಡಿ ಜಮೀನನ್ನು ಕೊಂಡವರು ಇದ್ದಾರೆ. ಮಣ್ಣು ತಿಂದು, ಹೊನ್ನ ಬೆಳೆದ ರೈತರು, ತಮ್ಮ ಸ್ವಂತ ಶ್ರಮದಿಂದ ಹಣವನ್ನು ಗಳಿಸಿ ಜಮೀನು ಕೊಂಡಿದ್ದಾರೆಯೇ ವಿನಃ ಬ್ಲಾಕ್ ಮಾರ್ಕೆಟ್‌ನಲ್ಲಿ ಕಳ್ಳಹಣ ಸಂಪಾದನೆ ಮಾಡಿದ ಜನರು ಮೈಸೂರು ರಾಜ್ಯದಲ್ಲಿ ಇಬ್ಬರಿಗೆ